## ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಬೆಂಗಳೂರು

ಸಂಖ್ಯೆ:ಆಆಶಾಖೆ/2011–12 ದಿ: 22–11–2011

### ಸಭಾ ನಡಾವಳಿಗಳು

ಶ್ರೀ ತುಷಾರ್ ಗಿರಿ ನಾಥ್, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿ: 21–11–2011ರಂದು ಬೆಳಿಗ್ಗೆ 10–00ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣ, ದಾವಣಗೆರೆ ಇಲ್ಲಿ ನಡೆದ ಬೆಂಗಳೂರು ಹಾಗೂ ಮೈಸೂರು ವಿಭಾಗಗಳ ಶೈಕ್ಷಣಿಕ, ಆರ್ಥಿಕ ಹಾಗೂ ಯೋಜನಾ ಚಟುವಟಿಕೆಗಳ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:–

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
2. ನಿರ್ದೇಶಕರು, ಎಸ್.ಎಸ್.ಎ. ಬೆಂಗಳೂರು
3. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಸಾ.ಶಿ.ಇ. ಬೆಂಗಳೂರು
4. ನಿರ್ದೇಶಕರು, ಆರ್.ಎಂ.ಎಸ್.ಎ. ಬೆಂಗಳೂರು
5. ನಿರ್ದೇಶಕರು, ಮೈನಾರಿಟಿ, ಬೆಂಗಳೂರು
6. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು
7. ಸಹನಿರ್ದೇಶಕು, ಎಸ್.ಎಸ್.ಎ. ಬೆಂಗಳೂರು
8. ಸಹನಿರ್ದೇಶಕು, ಎಂ.ಎಂ.ಎಸ್, ಬೆಂಗಳೂರು
9. ಸಹನಿರ್ದೇಶಕರು[ಶಾಲಾಶಿಕ್ಷಣ], ಬೆಂಗಳೂರು
10. ಉಪನಿರ್ದೇಶಕರು, ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು
11. ಉಪನಿರ್ದೇಶಕರು[ಯೋಜನೆ] ಹಾಗೂ ಆಯುಕ್ತರ ಕಛೇರಿಯ ಅಧಿಕಾರಿಗಳು
12. ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲಾ ಉಪನಿರ್ದೇಶಕರುಗಳು (ಆಡಳಿತ), ಉಪನಿರ್ದೇಶಕರು (ಅಭಿವೃದ್ಧಿ), ಹಾಗೂ ಡಿ.ವೈ.ಪಿ.ಸಿ.
13. ಕಾರ್ಯಕ್ರಮ ಅಧಿಕಾರಿಗಳು, ಎಸ್.ಎಸ್.ಎ. ಬೆಂಗಳೂರು
14. ಶ್ರೀ ಕೆ. ವಾಸುದೇವ್, ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ ವಿಭಾಗ), ರಾಜೀವ್ ಗಾಂಧೀ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು.
15. ಶಿಕ್ಷಕರ ವಸತಿ ಗೃಹಗಳ ನಿರ್ಮಾಣಕ್ಕೆ ಸಂಬಂಧಿಸಿದ ಜಿಲ್ಲಾ ಇಂಜಿನಿಯರ್‌ಗಳು, ನಿರ್ಮಿತಿ ಕೇಂದ್ರ

<u>**ಮೌಲ್ಯಮಾಪನ ಹಾಗೂ ಶಾಲಾ ಸಂದರ್ಶನ ಕಾರ್ಯಕ್ರಮ**</u>

ಶಾಲಾ ಸಂದರ್ಶನ ಹಾಗೂ ಮೌಲ್ಯಮಾಪನ ಕಾರ್ಯಕ್ರಮದ ವಿವರಣೆಯನ್ನು ಶ್ರೀ ಎಸ್.ಎಲ್. ಚವ್ಹಾಣ್, ಸಹ ನಿರ್ದೇಶಕರು (ಬೆಂಗಳೂರು ವಿಭಾಗ) ಇವರು ಸಭೆಗೆ ಜಿಲ್ಲಾವಾರು ಮನವರಿಕೆ ಮಾಡಿಕೊಡಲಾಯಿತು. ಕೋಲಾರ ಜಿಲ್ಲೆಯಲ್ಲಿ ನಡೆಸಲಾದ ಮೌಲ್ಯಮಾಪನ ನಿಗದಿತ ಗುರಿಗಿಂತ ಕಡಿಮೆ ಸಾಧನೆ ಮಾಡಲಾಗಿದೆ. ಶಾಲಾ ಸಂದರ್ಶನ ಸಮಾಧಾನಕರವಾಗಿದೆ. ಚಿಕ್ಕಬಳ್ಳಾಪುರ ಕಳೆದ ತಿಂಗಳು 8 ಮೌಲ್ಯಮಾಪನ ಆಗಿದೆ. 65 ಇದ್ದದ್ದು 81 ಆಗಿದೆ. ಶಾಲಾ ಸಂದರ್ಶನ 410 ಆಗಿದೆ ಎಂದು ತಿಳಿಸಿದರು.

ಅಕ್ಟೋಬರ್ ಮಾಹೆಯ ಪ್ರಗತಿ ಈ ಕೆಳಗಿನಂತೆ ಕೋಷ್ಠಕದಲ್ಲಿ ವಿವರಿಸಲಾಗಿದೆ. ಜಿಲ್ಲಾವಾರು ಉಪನಿರ್ದೇಶಕರು (ಆಡಳಿತ) ಅಭಿವೃದ್ಧಿ ಹಾಗೂ ಇಲಾಖಾ ಅಧಿಕಾರಿಗಳಿಂದ 2011 ರ ಅಕ್ಟೋಬರ್ ಮಾಹೆಯಲ್ಲಿ ಮಾಡಿದ ಮೌಲ್ಯಮಾಪನ ಮತ್ತು ಶಾಲಾ ಸಂದರ್ಶನದ ವಿವರ

| ಜಿಲ್ಲೆಗಳ ಹೆಸರು | ಅಧಿಕಾರಿ ಗಳ ಸಂಖ್ಯೆ | ಮೌಲ್ಯ ಮಾಪನ ಗುರಿ (ವಾರ್ಷಿಕ) | ಹಿಂದಿನ ತಿಂಗಳವರೆಗೆ ಮೌಲ್ಯ ಮಾಪನದ ಪ್ರಗತಿ | ಅಕ್ಟೋಬರ್–2011 ತಿಂಗಳಲ್ಲಿ ಮಾಡಲಾದ ಮೌಲ್ಯ ಮಾಪನ | ಇಲ್ಲಿಯವರೆ ಗಿನ ಒಟ್ಟು ಮೌಲ್ಯ ಮಾಪನ | ಶಾಲಾ ಸಂದರ್ಶನ ದ ಗುರಿ (ಮಾಸಿಕ) | ಕಳೆದ ತಿಂಗಳವರೆ ಗಿನ ಶಾಲಾ ಸಂದರ್ಶನ | ಪ್ರಸ್ತುತ ತಿಂಗಳ ಶಾಲಾ ಸಂದರ್ಶನ | ಈ ತಿಂಗಳವರೆಗಿ ನ ಒಟ್ಟು ಶಾಲಾ ಸಂದರ್ಶನ ಸಂಖ್ಯೆ |
|---|---|---|---|---|---|---|---|---|---|
| ಬೆಂಗಳೂರು ಉತ್ತರ | 18 | 430 | 173 | 12 | 185 | 240 | 272 | 59 | 331 |
| ಬೆಂಗಳೂರು ದಕ್ಷಿಣ | 21 | 520 | 55 | 27 | 82 | 300 | 142 | 55 | 197 |
| ಬೆಂಗಳೂರು ಗ್ರಾಮಾಂತರ | 29 | 660 | 90 | 42 | 132 | 550 | 571 | 76 | 647 |
| ರಾಮನಗರ | 22 | 520 | 59 | 12 | 71 | 380 | 557 | 76 | 633 |
| ಕೋಲಾರ | 31 | 740 | 128 | 6 | 134 | 520 | 1098 | 65 | 1163 |
| ಚಿಕ್ಕಬಳ್ಳಾಪುರ | 28 | 640 | 65 | 8 | 73 | 410 | 356 | 129 | 485 |
| ದಾವಣಗೆರೆ | 36 | 810 | 302 | 69 | 371 | 610 | 1606 | 223 | 1829 |
| ಚಿತ್ರದುರ್ಗ | 31 | 720 | 110 | 5 | 115 | 530 | 327 | 48 | 375 |
| ಮಧುಗಿರಿ | 18 | 410 | 186 | 22 | 208 | 270 | 881 | 297 | 1178 |
| ತುಮಕೂರು | 32 | 760 | 119 | 15 | 134 | 530 | 824 | 54 | 878 |
| ಶಿವಮೊಗ್ಗ | 37 | 850 | 213 | 14 | 227 | 640 | 1374 | 197 | 1571 |
| ಒಟ್ಟು | **303** | **7060** | **1500** | **232** | **1732** | **4980** | **8008** | **1279** | **9287** |

ಒಟ್ಟಾರೆ ಪರಿಶೀಲನೆಯ ಅವಧಿಯಲ್ಲಿ ಸಮುದಾಯದತ್ತ ಶಾಲೆಯಲ್ಲಿ ಸರಿಯಾಗಿ ಮಾರ್ಗದರ್ಶನ ಮಾಡದಿರುವುದು ಕಂಡುಬಂದಿರುತ್ತದೆ. ಶಾಲೆಗಳಲ್ಲಿ ಶೌಚಾಲಯಗಳು 90% ಮಾತ್ರ ಬಳಕೆಯಾಗುತ್ತಿದೆ ಎಂದು ಹೇಳಲಾಗುತ್ತಿದೆ. ಆದರೆ, 100% ಆಗಬೇಕು. ಎಲ್ಲಾ ಅಧಿಕಾರಿಗಳೂ ಮೌಲ್ಯಮಾಪನ ವರದಿಯೊಂದಿಗೆ ನಿಗದಿಪಡಿಸಿದ ನಮೂನೆಯನ್ನು ತಪ್ಪದೇ ನೀಡಬೇಕು. ಕೆಳಹಂತದ ಕಛೇರಿಯಲ್ಲಿ ಬಿಇಓ ಬಿಆರ್‌ಸಿ ಹಾಗೂ ಇನ್ನಿತರ ಶೈಕ್ಷಣಿಕ ಮಾರ್ಗದಶೀ ಅಧಿಕಾರಿಗಳ ವರದಿಗಳನ್ನು ಪರಿಶೀಲನೆ ನಡೆಸಬೇಕು. ಉಪ ನಿರ್ದೇಶಕರು (ಆಡಳಿತ) ಹಾಗೂ ಉಪ ನಿರ್ದೇಶಕರು (ಅಭಿವೃದ್ಧಿ) ಇವರ ಮೌಲ್ಯಮಾಪನ ನಮೂನೆ ಹಾಗೂ ವರದಿಗಳನ್ನು ಮಾತ್ರ ಸಹ ನಿರ್ದೇಶಕರಿಗೆ ಸಲ್ಲಿಸಬೇಕು ಎಂದು ತಿಳಿಸಿದರು. ಆಯುಕ್ತರು ಮಾತನಾಡಿ ಗುರಿಗಿಂತ ಕಡಿಮೆ ಸಾಧನೆ ಮಾಡಲಾಗಿದೆ. ಹೆಚ್ಚು ಸಾಧನೆ ಮಾಬೇಕು. ಅಕ್ಟೋಬರ್ ಮಾಹೆಯಲ್ಲಿ ಮಧ್ಯಂತರ ರಜೆ ಇದ್ದುದರಿಂದ ಈ ಬಾರಿಗೆ ವಿನಾಯ್ತಿ ನೀಡಿದ್ದು ಮುಂದಿನ ತಿಂಗಳಿನಲ್ಲಿ ಈ ಕೊರತೆ ಸರಿದೂಗಿಸಲು ಸೂಚನೆಯನ್ನು ನೀಡಿದರು.

(ಕ್ರಮ: ಬೆಂಗಳೂರು ವಿಭಾಗದ ಎಲ್ಲಾ ಉಪ ನಿರ್ದೇಶಕರು (ಆಡಳಿತ) ಹಾಗೂ ಉಪ ನಿರ್ದೇಶಕರು (ಅಭಿವೃದ್ಧಿ)

ಮೈಸೂರು ವಿಭಾಗದ ಪ್ರಗತಿ ವರದಿಯನ್ನು ಶ್ರೀ ಕುಮಾರಸ್ವಾಮಿ, ಸಹ ನಿರ್ದೇಶಕರು ಇವರು ಸಭೆಯಲ್ಲಿ ಪ್ರಸ್ತುತ ಪಡಿಸಿದರು. ಈಲ್ಲಾವಾರು ವಿವರ ಈ ಕೆಳಗಿನಂತೆ ನೀಡಲಾಯಿತು.

| ಜಿಲ್ಲೆಗಳ ಹೆಸರು | ನಿಗದಿಪಡಿಸಿದ ಶಾಲಾ ಮೌಲ್ಯ ಮಾಪನ ಸಂಖ್ಯೆ (ವಾರ್ಷಿಕ) | ಸೆಪ್ಟೆಂಬರ್ ಮಾಹೆಯಲ್ಲಿ ಮೌಲ್ಯ ಮಾಪನ ಮಾಡಿದ ಶಾಲಾ ಸಂಖ್ಯೆ | ಅಕ್ಟೋಬರ್ ಮಾಹೆಯಲ್ಲಿ ಮೌಲ್ಯ ಮಾಪನ ಮಾಡಿದ ಶಾಲಾ ಸಂಖ್ಯೆ | ಒಟ್ಟು ಮೌಲ್ಯಮಾಪನ ಮಾಡಿದ ಶಾಲೆಗಳ ಸಂಖ್ಯೆ | ಶಾಲಾ ಸಂದರ್ಶನ/ ತಪಾಸಣೆ ಮಾಡಬೇಕಾಗಿರುವ ಶಾಲೆಗಳ ಸಂಖ್ಯೆ | ಅಕ್ಟೋಬರ್ ಮಾಹೆಯಲ್ಲಿ ಕೈಗೊಂಡ ಶಾಲಾ ಸಂದರ್ಶನ ತಪಾಸಣೆ ಸಂಖ್ಯೆ |
|---|---|---|---|---|---|---|
| ಚಾಮರಾಜನಗರ | 30 | 5 | 0 | 5 | 20 | 0 |
| ಮಂಡ್ಯ | 30 | 3 | 3 | 6 | 20 | 0 |
| ಹಾಸನ | 30 | 5 | 2 | 7 | 20 | 3 |
| ಕೊಡಗು | 30 | 0 | 2 | 2 | 20 | 1 |
| ಉಡುಪಿ | 30 | 2 | 0 | 2 | 20 | 4 |
| ಮೈಸೂರು | 30 | 1 | 0 | 1 | 20 | 0 |
| ದಕ್ಷಿಣ ಕನ್ನಡ | 30 | 2 | 1 | 3 | 20 | 1 |
| ಚಿಕ್ಕಮಗಳೂರು | 30 | 1 | 0 | 1 | 20 | 0 |

ನಂತರ ಮಾತನಾಡುತ್ತಾ ಅವರು ಹಾಸನ ಮೊದಲ ಸ್ಥಾನ, ಮೈಸೂರು. ಚಿಕ್ಕಮಗಳೂರು ಅತೀ ಕಡಿಮೆ ಸಾಧನೆ ಮಾಡಲಾಗಿದೆ. ಮೌಲ್ಯಮಾಪನದಲ್ಲಿ ನಿಗದಿತ ಗುರಿ ಸಾಧನೆ ಆಗಿಲ್ಲ ಎಂದರು. ಆಯುಕ್ತರು ಮಾತನಾಡಿ ಉಳಿದ ದಿನಗಳಲ್ಲಿ ನಿಗದಿತ ಗುರಿ ಸಾಧನೆ ಮಾಡಲು ಸಾಧ್ಯವಿದೆಯೇ ಎಂಬ ಪ್ರಶ್ನೆ ಉದ್ಭವಿಸಿದೆ. ಹೆಚ್ಚು ಪ್ರಗತಿ ಸಾಧಿಸಿದ ಬಗ್ಗೆ ಪರಿಶೀಲಿಸಿ ಸಾಧ್ಯವಾಗುವ ಗುರಿಯೇ ಅಥವಾ ಸಾಧ್ಯವಾಗದ ಗುರಿಯೇ ಎಂದು ನೀವೇ ನಿರ್ಧರಿಸಬೇಕು. ಡಯಟ್ ಪ್ರಾಚಾರ್ಯರು ಮಾತನಾಡಿ ಜಿಲ್ಲಾ ತಾಲ್ಲೂಕು ಹಾಗೂ ಶಾಲಾ ಹಂತದಲ್ಲಿ ಸಂಶೋಧನೆ ಮಾಡುವ ಗುರಿ ಇದ್ದುದರಿಂದ ಮತ್ತು ನಿಗದಿತ ವಧಿಯಲ್ಲಿ ಸಾಧನೆ ಮಾಡಬೇಕಿರುವುದರಿಂದ ಹಾಲಿ ನೀಡಿರುವ ಗುರಿಯನ್ನು ಸಾಧಿಸಲು ಆಗುತ್ತಿಲ್ಲ ಎಂದರು. ಮಾನ್ಯ ಆಯುಕ್ತರು ಮಾತನಾಡುತ್ತಾ, ರಜೆ ಇದ್ದುದರಿಂದ ಮಾಡದೇ ಇರುವುದನ್ನು ಗಮನಿಸಲಾಗಿದ್ದು, ನವೆಂಬರ್ ನಂತರ ಗುರಿ ಪರಿಷ್ಕರಿಸಿ ನಿಗದಿತಗೊಳಿಸಲಾಗುವುದು. ಸಾಧನೆ ಮಾಡಿದ ಸಂಖ್ಯೆಯನ್ನಾಧರಿಸಿ ಉಪ ನಿರ್ದೇಶಕರು ಆಡಳಿತ ಹಾಗೂ ಉಪ ನಿರ್ದೇಶಕರು (ಅಭಿವೃದ್ಧಿ) ಇವರಿಗೆ ಗುರಿ ನಿಗದಿ ಪಡಿಸಲು ಸುತ್ತೋಲೆ ಹೊರಡಿಸುವುದಾಗಿ ಪ್ರಕಟಿಸಿದರು. ಡಿಡಿಪಿಐ ಗಿಂತ ಕೆಳಹಂತದ ನೌಕರರ ಗುರಿ ಕಡಿಮೆ ಮಾಡಲು ಸಾಧ್ಯವಿಲ್ಲ. ಗುಣಮಟ್ಟದ ಮೌಲ್ಯಮಾಪನ ಮಾಡಲು ಸಾಧ್ಯವಾಗಿದೆಯೇ? ವೈಯಕ್ತಿಕವಾಗಿ ಸಂದರ್ಶನ ಮೌಲ್ಯಮಾಪನ ಮಾಡಿ ವರದಿ ನೀಡಬೇಕು. ಬರೀ ನಮೂನೆ ತುಂಬಿ ತರುವ ಕೆಲಸ ಆಗಬಾರದು. ನವೆಂಬರ್‌ನಲ್ಲಿ ಹೆಚ್ಚು ಶ್ರಮ ವಹಿಸಲು ಸೂಚಿಸಿದೆ ಎಂದು ತಿಳಿಸಿದರು. ಬೆಂಗಳೂರು ದಕ್ಷಿಣ, ಚಿಕ್ಕಮಗಳೂರು, ಉಡುಪಿ, ಕೊಡಗು ಸಮರ್ಪಕ ಸಾಧನೆ ಮಾಡಿಲ್ಲ. ಡಯಟ್‌ನಲ್ಲಿ ಸಮರ್ಪಕ ಸಾಧನೆ ಮಾಡಬೇಕು. ಮೌಲ್ಯಮಾಪನದಲ್ಲಿ ಏನು ಕೊರತೆ ಕಂಡುಬಂದಿದೆ ಎಂಬುದನ್ನು ಆಧರಿಸಿ ಶಿಕ್ಷಕರಿಗೆ ತರಬೇತಿಗಳನ್ನು ಆಯೋಜಿಸಬೇಕು. ಡಯಟ್‌ನವರ ನಮೂನೆಯನ್ನು ಡಿಡಿಪಿಐ ಪಡೆದು ಆಯಾ ವಿಭಾಗದ ಸಹ ನಿರ್ದೇಶಕರಿಗೆ ಸಲ್ಲಿಸುವ ಕ್ರಮ ಆಗಬೇಕು. ಡಿಡಿಪಿಐಗಳು ಕೆಳಹಂತದ ನೌಕರರ ವರದಿಗಳನ್ನು ಕಡ್ಡಾಯವಾಗಿ ಪರಿಶೀಲನೆ ನಡೆಸಬೇಕು ಎಂದರು.

ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್‌ಗಳ ಮೌಲ್ಯಮಾಪನದ ವರದಿಗಳನ್ನು ಕ್ರೂಢೀಕರಿಸಿ ವೆಬ್‌ನಲ್ಲಿ ಪ್ರಕಟಿಸಲಾಗುವುದು. ಡಿಡಿಪಿಐ ಕಛೇರಿಗಳಲ್ಲಿ ಮೌಲ್ಯಮಾಪನಕ್ಕಾಗಿಯೇ ಒಂದು ಪ್ರತ್ಯೇಕ ವಿಭಾಗವನ್ನು ಪ್ರಾರಂಭ ಮಾಡಬೇಕು. ಸರಿಯಾದ ಮೌಲ್ಯಮಾಪನ ನಡೆಸದೇ ಇದ್ದಲ್ಲಿ ಬೇರೆ ಜಿಲ್ಲೆಗಳ ಡಿಡಿಪಿಐಗಳನ್ನು ನಿಯೋಜಿಸಿ ಪರಿಶೀಲನೆ ನಡೆಸಲಾಗುವುದು. ನಂತರ ನಿರ್ದೇಶಕರಿಂದ ಅಂತಿಮಗೊಳಿಸಲಾಗವುದು ಇದಕ್ಕಾಗಿ ಎಲ್ಲರೂ ಶ್ರಮವಹಿಸಿ ಕಾರ್ಯ

ಮಾಡಬೇಕು. ಪ್ರತಿ ತಿಂಗಳು 5 ರಿಂದ ಪ್ರಾರಂಭಿಸಿ 10ನೇ ತಾರೀಖಿನೊಳಗೆ ಜಿಲ್ಲಾ ಹಂತದಲ್ಲಿ ಪರಿಶೀಲನೆ ಮುಗಿಸಬೇಕು. 15ರೊಳಗೇ ಆಯುಕ್ತಾಲಯಕ್ಕೆ ಸಲ್ಲಿಸಬೇಕು. ಈ ಕುರಿತು ಡಿಡಿಪಿಐ ರವರು ಸಭೆ ನಡೆಸಿ ಪರಿಶೀಲನೆ ನಡೆಸಬೇಕು. ಸಹ ನಿರ್ದೇಶಕರುಗಳು ಗುಣಮಟ್ಟದ ಪರಿಶೀಲನೆ ನಡೆಸಬೇಕು. ಯಾವುದೇ ಕಾರಣಕ್ಕೂ ರಾಜಿಯಾಗಬಾರದು. ಕೆಳಹಂತದ ನೌಕರರನ್ನು ಕಛೇರಿ ಕೆಲಸಕ್ಕೆ ನಿಯುಕ್ತಿಗೊಳಿಸಬಾರದು. ಚಾಮರಾಜನಗರ, ಬೆಂಗಳೂರು ಗ್ರಾಮಾಂತರ ಹಾಗೂ ಚಿತ್ರದುರ್ಗ ಉಪ ನಿರ್ದೇಶಕರುಗಳು ನವೆಂಬರ್ 27ರಂದು ಬಂದು ಮೌಲ್ಯಮಾಪನದ ಗುರಿಯನ್ನು ಸಹ ನಿರ್ದೇಶಕರೊಂದಿಗೆ ಚರ್ಚಿಸಿ ಪರಿಷ್ಕರಿಸಿ ಅಂತಿಮಗೊಳಿಸಬೇಕು ಎಂದು ಸೂಚಿಸಿದರು.

(ಕ್ರಮ: ಬೆಂಗಳೂರು ಹಾಗೂ ಮೈಸೂರು ವಿಭಾಗದ ಎಲ್ಲಾ ಉಪ ನಿರ್ದೇಶಕರು (ಆಡಳಿತ) ಹಾಗೂ ಉಪ ನಿರ್ದೇಶಕರು (ಅಭಿವೃದ್ಧಿ)

**<u>ಸರ್ವ ಶಿಕ್ಷಣ ಅಭಿಯಾನ:</u>**

*<u>ಶಿಕ್ಷಕರ ತರಬೇತಿ:</u>*

ಸರ್ವ ಶಿಕ್ಷಣ ಅಭಿಯಾನ ಯೋಜನೆಯ ಆರ್ಥಿಕ ವೆಚ್ಚದ ಪ್ರಗತಿ ವರದಿಗಳನ್ನು ಪರಿಶೀಲಿಸಲಾಯಿತು. ಶಿಕ್ಷಕರ ತರಬೇತಿ ನೀಡುವಲ್ಲಿ ಶೇಕಡಾವಾರು ನಿಗದಿಪಡಿಸಿದ ಗುರಿಗಿಂತ ಕಡಿಮೆ ಪ್ರಗತಿ ಆಗಿದೆ. ರಾಮನಗರ ಜಿಲ್ಲೆಯಲ್ಲಿ ಅತೀ ಕಡಿಮೆ ತರಬೇತಿಗಳನ್ನು ಆಯೋಜಿಸಲಾಗಿದೆ. ಈ ಬಗ್ಗೆ ವಿವರಣೆ ಕೇಳಲಾಯಿತು. ಉಪ ನಿರ್ದೇಶಕರು, ರಾಮನಗರ ಇವರು ಮಾತನಾಡಿ ಮಾಗಡಿ ತಾಲ್ಲೂಕಿನಲ್ಲಿ ಸರಿಯಾಗಿ ಆಗಲಿಲ್ಲ. ಬಿಆರ್‌ಸಿ ಅಮಾನತ್ತು ಆಗಿದೆ. ಈಗ ಕ್ರಮ ಜರುಗಿಸಲಾಗುತ್ತಿದೆ ಎಂದರು. ಮೈಸೂರು ಜಿಲ್ಲೆಯಲ್ಲಿ ಶೇಕಡ 17.95% ಆಗಿದೆ. ಬಿಇಓ ವರ್ಗಾವಣೆಯಿಂದ ಕುಂಠಿತಗೊಂಡಿದ್ದು ಈ ಮಾಹೆಯಲ್ಲಿ ಸರಿದೂಗಿಸಲಾಗುವುದು ಎಂದು ತಿಳಿಸಿದರು. ನಿಗದಿತ ಅವಧಿಯಲ್ಲಿ ಗುರಿ ಸಾಧನೆ ಮಾಡಲು ಸೂಚಿಸಲಾಯಿತು. ಶಿಕ್ಷಣ ಸ್ವಯಂ ಸೇವಕರ ತರಬೇತಿ ಆಗದೇ ಇರುವ ಜಿಲ್ಲೆಗಳಿಂದ ಮಾಹಿತಿಯನ್ನು ಪಡೆಯಲಾಯಿತು.

*<u>ಸಿವಿಲ್ ಕಾಮಗಾರಿಗಳು:</u>*

ಬೆಂಗಳೂರು ನಗರ ಜಿಲ್ಲೆಯಲ್ಲಿ ಶೇಕಡ 16.03% ಸಾಧನೆ ತೋರಿಸಲಾಗಿದೆ. ನಿಗದಿ ಪಡಿಸಿದ ಗುರಿ 1020.945 ಗುರಿ ಇದ್ದು 163.625% ಸಾಧನೆ ಆಗಿದೆ ವಿವರ ಕೇಳಲಾಯಿತು. ಡಿ.ಐ.ಸಿ ಸಭೆ ತಡವಾಗಿದ್ದು ಕೂಡಲೇ ಅನುದಾನ ಬಿಡುಗಡೆಗೊಳಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸುವುದಾಗಿ ಉಪ ನಿರ್ದೇಶಕರು ತಿಳಿಸಿದರು. ಅದೇ ರೀತಿ ಚಿತ್ರದುರ್ಗ, ಕೋಲಾರ ಹಾಗೂ ಚಿಕ್ಕಬಳ್ಳಾಪುರಗಳಲ್ಲಿ ಹೆಚ್ಚು ಸಾಧನೆ ಮಾಡಿಲ್ಲ ಎಂದು ವಿವರಣೆ ಕೇಳಲಾಯಿತು. ಶಿವಮೊಗ್ಗದಲ್ಲಿ ಶೇಕಡ 30.11 ಸಾಧನೆ ಆಗಿದೆ. ಉಪ ಯೋಜನಾ ಸಮನ್ವಯಾಧಿಕಾರಿ ವಿವರಣೆ ನೀಡಿ 15 ಶಾಲೆಗಳಿಗೆ ಸೈಟ್ ಇಲ್ಲ. ಬದಲಾವಣೆಗೆ ರಾಜ್ಯ ಕಛೇರಿಗೆ ಪತ್ರವ್ಯವಹಾರವಾಗಿದೆ. ಅವಶ್ಯಕತೆಯಿರುವ ಶಾಲೆಗಳಿಗೆ ನೀಡಿದಲ್ಲಿ ಅನುಕೂಲವಾಗುವುದು ಎಂದು ಕೋರಿದರು. ಡೈಸ್‌ನಲ್ಲಿನ ಮಾದರಿ ಆಧರಿಸಿ ಕ್ರಿಯಾಯೋಜನೆ ಅನುಮೋದಿಸಿದ್ದು, ಬದಲಾವಣೆ ಆಗುವುದಿಲ್ಲ. ಪ್ರಸಕ್ತ ವರ್ಷದ ಡೈಸ್‌ನಲ್ಲಿ ಬಂದಿದ್ದರೆ ಈ ವರ್ಷದ ಕ್ರಿಯಾಯೋಜನೆಯಲ್ಲಿ ಸೇರಿಸಲಾಗುವುದು. ಬದಲಾವಣೆಗೆ ಅವಕಾಶವಿಲ್ಲ. ಹಳೇ ಕೊಠಡಿಯಿದ್ದು ನೆಲಸಮಗೊಳಿಸಲಾದ ಸ್ಥಳದಲ್ಲಿ ಅವಶ್ಯಕತೆಯಿದ್ದರೆ ಬದಲಾವಣೆ ಮಾಡಲು ಅವಕಾಶವಿದ್ದಲ್ಲಿ ಪ್ರಸ್ತಾವನೆ ಸಲ್ಲಿಸಲು ಸೂಚನೆ ನೀಡಲಾಯಿತು. ಐದು ಕೊಠಡಿಗಳನ್ನು ನೆಲಸಮಗೊಳಿಸಿರುವುದರಿಂದ ಅವುಗಳಿಗೆ ಮಾತ್ರ ಕಟ್ಟಲು ಅವಕಾಶವಿರುವ ಬಗ್ಗೆ ಪರಿಶೀಲಿಸುವುದಾಗಿ ಆಯುಕ್ತರು ತಿಳಿಸಿದರು. ಜಾಗವಿಲ್ಲದ ಕಡೆ ಹೊರಗಡೆಯಿಂದ ಕಾಲಂ ಹಾಕಿ ಕೊಠಡಿ ನಿರ್ಮಿಸುವ ಬಗ್ಗೆ ರಾಜ್ಯ ಅಭಿಯಂತರರಿಂದ ತಾಂತ್ರಿಕ ಸಲಹೆ ಪಡೆದು ನಿರ್ಮಿಸಲು ಸೂಚನೆ ನೀಡಲಾಯಿತು. ಮೈಸೂರು ವಿಭಾಗದ ಸಿವಿಲ್ ಕಾಮಗಾರಿಗಳ ಪ್ರಗತಿಯನ್ನೂ ಸಹ ಪರಿಶೀಲನೆ ನಡೆಸಲಾಯಿತು.

*<u>ಕಮ್ಯೂನಿಟಿ ಮೊಬೈಲೈಸೇಷನ್:</u>*

ಈ ಶೀರ್ಷಿಕೆಯಡಿ ಬಿಡುಗಡೆಯಾದ ಅನುದಾನವು ಕಡಿಮೆಯಿದ್ದು CALC ಶೀರ್ಷಿಕೆಯ ಅಡಿಯಲ್ಲಿ ಅನುದಾನ ಕಡಿಮೆಯಿದ್ದಲ್ಲಿ ಆಡಳಿತ ನಿರ್ವಹಣೆ ಅನುದಾನದಲ್ಲಿ (Management Cost) ಅವಶ್ಯವಿರುವ ಅನುದಾನವನ್ನು ಈ ಅನುದಾನದೊಂದಿಗೆ ಭರಿಸಲು ಸೂಚನೆ. ಸೈಟ್ ಸಿದ್ಧತೆ ಮಾಡಲು, ಎ.ಎಂ.ಸಿ.ಗೆ ನೀಡದೆ ಶಾಲೆಗೆ ಎಸ್.ಡಿ.ಎಂ.ಸಿಗೆ ಮಂಜೂರು ಮಾಡಿ. ಈ ಅನುದಾನದಲ್ಲಿ ಇದ್ದ ಹಣವನ್ನು ಕೂಡಲೇ ಬಿಡುಗಡೆ ಮಾಡಲು ಸೂಚಿಸಲಾಯಿತು.

*ನಿವಾಸಿ ಶಾಲೆಗಳು:*

ಬಹುತೇಕ ಜಿಲ್ಲೆಗಳಲ್ಲಿ ವೆಚ್ಚ ಭರಿಸಿಲ್ಲ. ಕೆಲವು ಸರ್ಕಾರಿ ಶಾಲೆಗಳಲ್ಲಿ ನಿವಾಸಿ ಶಾಲೆ ನಡೆಸುತ್ತಿದ್ದು ಎಹೆಣ್ಣುಮಕ್ಕಳಿಗೆ ಶೌಚಾಲಯ ಹಾಗೂ ಸ್ನಾನ ಗೃಹದ ತೊಂದರೆಯಾಗುತ್ತಿದ್ದು ತಾತ್ಕಾಲಿಕವಾಗಿ ಜಾಗವಿರುವ ಸ್ಥಳದಲ್ಲಿ ನಿರ್ಮಿಸಲು ಅನುಮತಿಗಾಗಿ ಪತ್ರ ವ್ಯವಹಾರ ನಡೆಸಿದ್ದು ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ನಂತರ, ನಿವಾಸಿ ಶಾಲೆಯನ್ನು ಸರ್ಕಾರಿ ಶಾಲೆಯಲ್ಲಿ ನಡೆಸುತ್ತಿದ್ದಲ್ಲಿ ಬಾಡಿಗೆಗಾಗಿ ನಿಗದಿಪಡಿಸಿದ ಮೊತ್ತದಲ್ಲಿ ಶೌಚಾಲಯ ಹಾಗೂ ಸ್ನಾನಗೃಹವನ್ನು ತಾತ್ಕಾಲಿಕವಾಗಿ ಅಥವಾ /ಪರ್ಮನೆಂಟ್ ಆಗಿ ನಿರ್ಮಿಸಲು ಸೂಚನೆ ನೀಡಲಾಯಿತು.

*ಸಮನ್ವಯ ಶಿಕ್ಷಣ :*

ವಿವಿಧ ಜಿಲ್ಲೆಗಳಲ್ಲಿ 90 ದಿನಗಳ ಬುನಾದಿ ತರಬೇತಿಗಳನ್ನು ಆಯೋಜಿಸಿರುವ ಬಗ್ಗೆ ಮಾಹಿತಿಯನ್ನು ಜಿಲ್ಲಾವಾರು ಪರಿಶೀಲಿಸಲಾಯಿತು. ವರದಿ ನೀಡದೇ ಇದ್ದ ಜಿಲ್ಲೆಗಳಿಂದ ಮಾಹಿತಿ / ವಿವರಣೆ ಕೇಳಲಾಯಿತು. ತರಬೇತಿಗಳನ್ನು ಕೂಡಲೇ ನಡೆಸಿ ನಿಗದಿತ ಗುರಿಯನ್ನು ಸಾಧಿಸಲು ಕ್ರಮವಹಿಸಲು ತಿಳಿಸಲಾಯಿತು.

*ಹದಿಹರೆಯದ ಹೆಣ್ಣುಮಕ್ಕಳ ಜಗೃತಿ ಶಿಬಿರ*

ಸೆಪ್ಟೆಂಬರ್ 2011 ರೊಳಗೇ ಆರ್‌ಪಿ ಗಳ ತರಬೇತಿಯನ್ನು ನೀಡಲು ಪತ್ರ ಬರೆಯಲಾಗಿತ್ತು. ಆದರೆ, ಇದುವರೆಗೂ ಕೆಲವು ಜಿಲ್ಲೆಗಳಲ್ಲಿ ತರಬೇತಿಯನ್ನು ನಡೆಸದಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಲಾಯಿತು. ನವೆಂಬರ್ ಅಂತ್ಯದೊಳಗೇ ತರಬೇತಿಯನ್ನು ಮುಗಿಸಿ ಪ್ರಗತಿಯನ್ನು ಸಾಧಿಸಲು ಹಾಗೂ ವರದಿಯನ್ನು ನೀಡಲು ಎಲ್ಲರಿಗೂ ಸೂಚನೆ ನೀಡಲಾಯಿತು. ವರದಿ ನೀಡಿರದ ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ತುಮಕೂರು ಇವರಿಂದ ಮಾಹಿತಿ ಪಡೆಯಲಾಯಿತು. ಮೈಸೂರು ವಿಭಾಗದ ಎಂಟು ಜಿಲ್ಲೆಗಳ ವರದಿ ಸಲ್ಲಿಕೆಯಾಗಿರುವುದಿಲ್ಲ ಎಂದು ಆಕ್ಷೇಪಿಸಲಾಯಿತು. ಆದರೆ, ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ನವೆಂಬರ್ ಮಾಹೆಯಲ್ಲಿ ತರಬೇತಿ ನೀಡಲಾಗಿದೆ. ವರದಿ ಸಲ್ಲಿಕೆಯಲ್ಲಿ ವಿಳಂಬವಾಗಿದ್ದು ಕೂಡಲೇ ಸಲ್ಲಿಸುವುದಾಗಿ ತಿಳಿಸಿದರು.

*ಹೊಸ ಕೆ.ಜಿ.ಬಿ.ವಿ. ಶಾಲೆಗಳು*

ಕಾಮಗಾರಿಗಳು ಯಾವ ಹಂತದಲ್ಲಿದೆ ಎಂಬ ಬಗ್ಗೆ ಎಲ್ಲಾ ಜಿಲ್ಲೆಗಳಿಂದ ವಿವರ ಪಡೆಯಲಾಯಿತು. ಹಾಗೂ ಶಾಲೆಯಲ್ಲಿ ದಾಖಲಾದ ಮಕ್ಕಳ ವಿವರವನ್ನು ಪಡೆಯಲಾಯಿತು. ನಿವೇಶನದ ಬಗ್ಗೆ ತೊಂದರೆಯಿದ್ದಲ್ಲಿ ಹಸ್ತಾಂತರದ ಬಗ್ಗೆ ಆದಷ್ಟು ಜಾಗ್ರತೆ ಸಂಬಂಧಪಟ್ಟವರೊಡನೆ ಚರ್ಚಿಸಿ ಅಂತಿಮವಾಗಿ ಕ್ರಮವಹಿಸಲು ಸೂಚನೆ ನೀಡಲಾಯಿತು. ಮಾಡೆಲ್ ಪ್ಲಾನ್ ಸಿದ್ಧಪಡಿಸಿದ್ದು, ಮಾಡೆಲ್ ಎಸ್ಟಿಮೇಟ್ ತಯಾರಿಸಿ ಒಂದು ತಿಂಗಳೊಳಗೇ ವರದಿ ನೀಡಲು ರಾಜ್ಯ ಅಭಿಯಂತರರಿಗೆ ಸೂಚನೆ ನೀಡಲಾಯಿತು. ಸ್ಥಳದ ಸರ್ವೇ ನಂಬರ್, ಜಿಲ್ಲಾಧಿಕಾರಿಗಳ ಆದೇಶ ಹಾಗೂ ಆರ್‌ಟಿಸಿದೊಂದಿಗೆ ವರದಿ ನೀಡುವುದು. ಮಕ್ಕಳ ದಾಖಲಾತಿ ಕಡಿಮೆ ಇರುವ ಕಡೆ 7ನೇ ತರಗತಿ ಮುಗಿಸಿದ ಡ್ರಾಪ್ ಔಟ್‌ಗಳನ್ನು ಸೇರಿಸಲು ಅಗತ್ಯ ಕ್ರಮ ವಹಿಸುವುದು ಎಂದು

*ಸಿವಿಲ್ ಕಾಮಗಾರಿಗಳು:*

2008–09, 2009–10 ಹಾಗೂ 2010–11ನೇ ಸಾಲಿನ ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ಮಂಜೂರಾಗಿರುವ ಹೆಚ್ಚುವರಿ ಕೊಠಡಿಗಳ ನಿರ್ಮಾಣದ ಬಗ್ಗೆ ವಿವರ ಕೇಳಲಾಯಿತು. 2008–09ರಲ್ಲಿ ಮಂಜೂರಾದ ಕೊಠಡಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನ್ಯಾಯಾಲಯದಲ್ಲಿ ಬಾಕಿಯಿದ್ದು ಅಚಿತಿಮ ಹಂತದಲ್ಲಿದೆ ಎಂದು ತಿಳಿಸಲಾಯಿತು. ಚಾಮರಾಜನಗರದಲ್ಲಿ ಮೂರು ಶೌಚಾಲಯ ಕಾಮಗಾರಿ ಬಾಕಿಯಿದ್ದು, ಅರಣ್ಯ ಪ್ರದೇಶದಲ್ಲಿ

ಶಾಲೆಗಳಿದ್ದು ಅರಣ್ಯ ಇಲಾಖೆಯ ಶೆಡ್‌ಗಳಲ್ಲಿ ಶಾಲೆ ನಡೆಸಲಾಗುತ್ತಿದೆ. ಇದು ರಕ್ಷಿತ ಅರಣ್ಯವಾದ್ದರಿಂದ ಶೌಚಾಲಯ ನಿರ್ಮಿಸಲು ಜಾಗ ಇರುವುದಿಲ್ಲವೆಂದು ಉಪ ನಿರ್ದೇಶಕರು ತಿಳಿಸಿದರು. ಇರುವ ಶೆಡ್‌ನಲ್ಲಿ ಜಾಗವಿದ್ದಲ್ಲಿ ಶೌಚಾಲಯ ನಿರ್ಮಿಸಲು ಸೂಚನೆ ನೀಡಲಾಯಿತು. ರಾಮನಗರ 2 ಕಾಮಗಾರಿ ಮುಗಿದಿದೆ. ದಾವಣಗೆರೆ ಜಿಲ್ಲೆಯಲ್ಲಿ ಎರಡು ಕಾಮಗಾರಿ ಬಾಕಿಯಿದ್ದು 15 ದಿನದಲ್ಲಿ ಮುಗಿಯುತ್ತದೆ ಎಂದು ವರದಿ ನೀಡಿರುತ್ತಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಏಳು ಕಾಮಗಾರಿಗಳು ಬಾಕಿಯಿದ್ದು ಆರು ಮುಗಿದಿದೆ ಹಾಗೂ ಒಂದು ನಿವೇಶನಕ್ಕೆ ಸಂಬಂಧಿಸಿದಂತೆ ಪ್ರಕರಣ ನ್ಯಾಯಾಲಯದಲ್ಲಿದೆ.

*2012–12ನೇ ಸಾಲಿನ ಕ್ರಿಯಾಯೋಜನೆ ತಯಾರಿಕೆಯ ಪೂರ್ವಸಿದ್ಧತೆ :*

ಬೆಂಗಳೂರು ದಕ್ಷಿಣ, ಉತ್ತರ, ಗ್ರಾಮಾಂತರ ಹಾಗೂ ಹಾಸನ ಜಿಲ್ಲೆಯಿಂದ ಡೈಸ್‌ನ ಡಿ.ಎಂ.ಪಿ. ಬಂದಿಲ್ಲ. ಕೂಡಲೇ ಸಲ್ಲಿಸಲು ತಿಳಿಸಲಾಯಿತು. ಡೇಟಾ ಸಂಗ್ರಹಣೆ ಹಾಗೂ ಪರಿಶೀಲನೆಯಲ್ಲಿ ವಹಿಸಬೇಕಾದ ಕ್ರಮಗಳ ಬಗ್ಗೆ ಈ ಕೆಳಗಿನಂತೆ ಮಾಹಿತಿ ನೀಡಲಾಯಿತು.

ಡೈಸ್ ಪರಿಶೀಲನೆಯು ಸಮರ್ಪಕವಾಗಿ ಆಗುತ್ತಿಲ್ಲ. ಪ್ರಯುಕ್ತ ಕ್ಲಸ್ಟರ್, ತಾಲ್ಲೂಕು ಹಾಗೂ ಜಿಲ್ಲಾ ಹಂತದಲ್ಲಿ ಕಡ್ಡಾಯವಾಗಿ ಪರಿಶೀಲನೆ ನಡೆಸಬೇಕು. ಜಿ.ಪಿ.ಎಸ್. ನಿರ್ವಹಣೆ ಬಗ್ಗೆ ವಿವರ ಕೇಳಲಾಯಿತು. 37% ಪ್ರಗತಿ ಆಗಿದೆ. ಈಗಾಗಲೇ ಸಾಕಷ್ಟು ವಿಳಂಬವಾಗಿದ್ದು, ಎಷ್ಟು ದಿನಗಳೊಳಗೆ ನೀಡಲಾಗುವುದು ಎಂದು ಲಿಖಿತವಾಗಿ ಈ ದಿನವೇ ನೀಡಲು ಸೂಚನೆ ನೀಡಲಾಯಿತು.

(ಕ್ರಮ: ಬೆಂಗಳೂರು ಹಾಗೂ ಮೈಸೂರು ವಿಭಾಗದ ಎಲ್ಲಾ ಉಪ ನಿರ್ದೇಶಕರು (ಆಡಳಿತ) ಹಾಗೂ ಉಪ ನಿರ್ದೇಶಕರು (ಅಭಿವೃದ್ಧಿ)

*ರಾಷ್ಟ್ರೀಯ ಮಾಧ್ಯಮಿಕ ಯೋಜನೆ ಅಭಿಯಾನ:*

ಶಾಲೆಯಿಂದ ಹೊರಗುಳಿದ ಮಾಹಿತಿಯನ್ನು 6 ಜಿಲ್ಲೆಗಳು ನೀಡಿದ್ದು, 13 ಜಿಲ್ಲೆಗಳಿಂದ ಬಂದಿಲ್ಲ. ನಿಗದಿತ ನಮೂನೆಯನ್ನು ನೀಡುತ್ತಿದ್ದು ಅದನ್ನು ಆರ್.ಎಂ.ಎಸ್.ಎ. ವಿಭಾಗಕ್ಕೆ ತುಂಬಿ ನೀಡಲು ಸೂಚನೆ ನೀಡಲಾಯಿತು. 2011–2ನೇ ಸಾಲಿನ ಸೆಮಿಸ್ ಮಾಹಿತಿಯ ಸಂಗ್ರಹಣೆಯ ವೇಳಾಪಟ್ಟಿಯನ್ನು ಹಾಗೂ ಮಾರ್ಗಸೂಚಿಯನ್ನು ನೀಡಲಾಯಿತು.

ಡೈಸ್ ಹಾಗೂ ಸೆಮಿಸ್‌ನ ಕಾರ್ಯಗಳನ್ನು ಇರುವ ಕಂಪ್ಯೂಟರ್ ಪ್ರೋಗ್ರಾಮರ್‌ಗಳೇ ಮಾಡಬೇಕು. ಸಂಭಾವನೆ ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುವುದು. ಸೆಮಿಸ್‌ಗಾಗಿ ಯಾವುದೇ ಪ್ರತ್ಯೇಕ ಸಂಭಾವನೆಯನ್ನು ನೀಡಲಾಗುವುದಿಲ್ಲ ಎಂದು ಸ್ಪಷ್ಟಪಡಿಸಲಾಯಿತು. ತಿರಸ್ಕರಿಸುವ ಅಥವಾ ನಿರಾಕರಿಸುವವರನ್ನು ಬದಲಾಯಿಸಲು ಸೂಚನೆ ನೀಡಲಾಯಿತು.

*ಆದರ್ಶ ವಿದ್ಯಾಲಯ: (ನಿವೇಶನ ಕೊರತೆ)*

ಚಾಮರಾಜನಗರ ಜಿಲ್ಲೆಗೆ ಗುಂಡ್ಲುಪೇಟೆ (ಚಿಕ್ಕತೂಬೂರು) ಇದರ ನಿವೇಶನಕ್ಕೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳ ಬಳಿ ಕಡತ ಚಾಲನೆಯಲ್ಲಿದೆ. ಡಿಸೆಂಬರ್ ಅಂತ್ಯದೊಳಗೆ ಅಂತಿಮಗೊಳಿಸಲಾಗುವುದು. ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿಗೆ ಮಂಜೂರಾದ ಶಾಲೆಗೆ ರೇಷ್ಮೆ ಇಲಾಖೆಯ ಜಾಗ ಪಡೆಯಲು ಕ್ರಮವಹಿಸಲಾಗಿದೆ. ಆರ್.ಟಿ.ಸಿ. ಇಲಾಖೆಗೆ ಬದಲಾಯಿಸಿ ನೀಡಲು ಕ್ರಮವಹಿಸಲು ಸೂಚನೆ ನೀಡಲಾಯಿತು. ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿಗೆ ಮಂಜೂರಾದ ಶಾಲೆಗೆ ಹುಣಸೂರು ಟೌನ್‌ನಲ್ಲಿ ಜಾಗ ಇದೆ. ಮೈಸೂರು ಉತ್ತರ ಶಾಲೆಯ ಜಾಗ ಇದೆ ಎಂದು ಸಂಬಂಧಪಟ್ಟ ಉಪ ನಿರ್ದೇಶಕರು ತಿಳಿಸಿದರು. ಅದರಂತೆಯೇ, ಉಳಿದ ಶಾಲೆಗಳಿಗೆ ಇದ್ದ ನಿವೇಶನದ ಗೊಂದಲಕ್ಕೆ ಸಂಬಂಧಪಟ್ಟಂತೆ ಕೈಗೊಂಡ ಕ್ರಮಗಳ ಬಗ್ಗೆ ಆಯಾ ಜಿಲ್ಲೆಗಳ ಉಪ ನಿರ್ದೇಶಕರು ವರದಿ ನೀಡಿದರು.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಚಿಕ್ಕತೂಬೂರು ಗ್ರಾಮದಲ್ಲಿ ನಿವೇಶನ, ಚಾಮರಾಜನಗರ ಡಿಸೆಂಬರ್ ಅಂತ್ಯದೊಳಗೆ ಜಿಲ್ಲಾಧಿಕಾರಿಗಳ ಬಳಿ ಕಡತ ಚಾಲನೆಯಲ್ಲಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು

ತಾಲ್ಲೂಕಿನ ಆದರ್ಶ ವಿದ್ಯಾಲಯ ನಿರ್ಮಾಣಕ್ಕೆ ರೇಷ್ಮೆ ಇಲಾಖೆಯ ಅಧೀನದಲ್ಲಿನ ಜಾಗ ಪಡೆಯಲು ಕ್ರಮವಹಿಸಲಾಗಿದೆ. ಆರ್.ಟಿ.ಸಿ. ಬದಲಾಯಿಸಿ ನೀಡಲು ಸೂಚನೆ ನೀಡಲಾಯಿತು. ಮೈಸೂರು ಜಿಲ್ಲೆಯ ಹುಣಸೂರು ಪಟ್ಟಣದಲ್ಲಿ ಜಾಗ ಇದೆ.. ಮೈಸೂರು ಉತ್ತರದಲ್ಲಿ ಶಾಲೆಯ ಜಾಗ ಇದೆ. ಅದರಲ್ಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದು ಉಪ ನಿರ್ದೇಶಕರು ತಿಳಿಸಿದರು. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಆದರ್ಶ ವಿದ್ಯಾಲಯ ಕಾಮಗಾರಿಗೆ ನಿವೇಶನಕ್ಕಾಗಿ ಕಡತ ಜಿಲ್ಲಾಧಿಕಾರಿಗಳಿಗೆ ಹೋಗಿದೆ. ಚಳ್ಳಕೆರೆ ತಾಲ್ಲೂಕಿನಲ್ಲಿ ನಿವೇಶನದ ಸಮಸ್ಯೆಯಿದೆ. ಮುಂದಿನವಾರದಲ್ಲಿ ಪರಿಹರಿಸ ಲಾಗುವುದು. ಈಗಾಗಲೇ ತಹಸೀಲ್ದಾರ್, ಇಓ ಹಾಗೂ ಬಿಇಓ ಹಂತದಲ್ಲಿ ಸಮಿತಿ ರಚಿಸಲಾಗಿದೆ ಎಂದು ಉಪ ನಿರ್ದೇಶಕರು ತಿಳಿಸಿದರು. ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿಗೆ ಮಂಜೂರಾದ ಆದರ್ಶ ಶಾಲೆಯ ನಿರ್ಮಾಣಕ್ಕೆ ಜಾಗವಿದೆ. ಮುಳಬಾಗಿಲು ಹಾಗೂ ಶ್ರೀನಿವಾಸನಗರ ಈ ಎರಡೂ ಕಾಮಗಾರಿಗಳಿಗೆ ಜಾಗ ನೀಡಲು ಜಿಲ್ಲಾಧಿಕಾರಿಗಳು ಒಪ್ಪಿದ್ದಾರೆ ಎಂದು ಉಪ ನಿರ್ದೇಶಕರು ತಿಳಿಸಿದರು. ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿಗೆ ಮಂಜೂರಾದ ಆದರ್ಶ ಶಾಲೆಯ ನಿರ್ಮಾಣಕ್ಕೆ ಅವಶ್ಯವಾದ ಎರಡು ಎಕರೆ ಜಾಗ ಇದೆ. ಆರ್.ಟಿ.ಸಿ ಆಗಲು ಸಮಯ ಬೇಕಿದೆ ಎಂದು ತಿಳಿಸಿದರು. ಜಿಲ್ಲಾಧಿಕಾರಿಗಳೊಂದಿಗೆ ಸಮಾಲೋಚಿಸಿ ಕಾಮಗಾರಿಗಳಿಗೆ ಅವಶ್ಯವಿರುವ ನಿವೇಶನಗಳನ್ನು ಪಡೆಯುವ ಬಗ್ಗೆ ಕ್ರಮವಿಡಲು ತಿಳಿಸಲಾಯಿತು.

*ಹೆಣ್ಣು ಮಕ್ಕಳ ವಸತಿ ನಿಲಯ:*

ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿಗೆ ಮಂಜೂರಾದ ಶಾಲೆಗೆ ಆದರ್ಶ ಶಾಲೆಯ ನಿವೇಶನದಲ್ಲೇ ಉಳಿದಿರುವ ಸ್ಥಳದಲ್ಲಿ ಆರಂಭಿಸಲಾಗಿದೆ ಎಂದು ಮೈಸೂರು ಜಿಲ್ಲೆಯ ಉಪ ನಿರ್ದೇಶಕರು ತಿಳಿಸಿದರು. ರಾಮನಗರ ಜಿಲ್ಲೆಯ ಚನ್ನಪಟ್ಟಣ ಗ್ರಾಮದಲ್ಲಿ ಚಕ್ಕೆರೆ ಗ್ರಾಮಕ್ಕೆ ಮಂಜೂರಾಗಿದ್ದು, 15 ದಿನದಲ್ಲಿ ಮುಗಿಸಬೇಕು ಎಂದು ನಿರ್ದೇಶನ ನೀಡಲಾಗಿದೆ.

*ಶಾಲಾ ಅನುದಾನ ಹಾಗೂ ಶಾಲಾ ನಿರ್ವಹಣಾ ಅನುದಾನ:*

ಶಾಲೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆಯೇ ಎಂಬ ಬಗ್ಗೆ ಖಚಿತ ಪಡಿಸಿಕೊಳ್ಳಬೇಕು. ಬಿಡುಗಡೆಯಾದ ಅನುದಾನಕ್ಕೆ ನೇರವಾಗಿ ಚಾರ್ಟಡ್ ಅಕೌಂಟೆಂಟ್ ಶಾಲೆಗಳಿಗೆ ಹೋಗಿ ಅನುದಾನದ ಸಮರ್ಪಕ ನಿರ್ವಹಣೆ ಬಗ್ಗೆ ತಪಾಸಣೆ ಮಾಡಲಿದ್ದು ಈ ಬಗ್ಗೆ ಮುಖ್ಯ ಶಿಕ್ಷಕರಿಗೆ ಸೂಚನೆ ನೀಡಬೇಕು. ನಿಗದಿ ಪಡಿಸಿದ ಅನುದಾನದ ಗುರಿಯನ್ನು ಯಾವ ಕಾರಣಕ್ಕೂ ಮೀರದಿರಲು ಸೂಚಿಸಬೇಕು.

*ಮುಖ್ಯ ಶಿಕ್ಷಕರ ಶೈಕ್ಷಣಿಕ ಪ್ರವಾಸ:*

ಮುಖ್ಯ ಶಿಕ್ಷಕರ ಪ್ರವಾಸ ಕುರಿತಂತೆ ಬೇರೆ ಬೇರೆ ಜಿಲ್ಲೆಗಳಿಗೆ ವಿಭಿನ್ನ ನಿಲುವು ತಳೆಯುತ್ತಿದ್ದು, ಈ ಬಗ್ಗೆ ಯಾವ ಜಿಲ್ಲೆಯಿಂದ ಯಾವ ರಾಜ್ಯದ ಜಿಲ್ಲೆಗೆ ಹೋಗಬೇಕು ಎಂಬ ಬಗ್ಗೆ ರಾಜ್ಯ ಯೋಜನಾ ಕಛೇರಿಯಿಂದಲೇ ಸುತ್ತೋಲೆ ಹೊರಡಿಸಲಾಗುವುದು ಎಂದು ಆಯುಕ್ತರು ತಿಳಿಸಿದರು. ಉಡುಪಿ ಜಿಲ್ಲೆ ಹೊರತು ಪಡಿಸಿ ಉಳಿದ ಯಾವ ಜಿಲ್ಲೆಯಿಂದಲೂ ಇನ್ನೂ ಪ್ರವಾಸ ಹೋಗದಿರುವ ಹಿನ್ನೆಲೆಯಲ್ಲಿ ಏಕರೂಪದ ಸುತ್ತೋಲೆ ಹೊರಡಿಸಲು ಕ್ರಮಕೈಗೊಳ್ಳಬೇಕು ಎಂದು ತಿಳಿಸಲಾಯಿತು. ಈ ಕ್ರಮವನ್ನು ಡಿಸೆಂಬರ್ 2011ರೊಳಗೇ ಮುಗಿಸಬೇಕು. ಹಾಗೂ ಜನವರಿ 15ರೊಳಗೇ ಉಪಯೋಗತಾ ಪ್ರಮಾಣಪತ್ರವನ್ನು ನೀಡಬೇಕು ಎಂದು ತಿಳಿಸಿದರು.

*ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ*

ಎಲ್ಲಾ ಜಿಲ್ಲೆಗಳಿಂದಲೂ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸಗಳನ್ನು ಡಿಸೆಂಬರ್ 2011ರೊಳಗೇ ಆಯೋಜಿಸಿ ಮುಗಿಸಬೇಕು. ಜನವರಿ 15ರೊಳಗೇ ಉಪಯೋಗತಾ ಪ್ರಮಾಪತ್ರ ನೀಡಬೇಕು ಎಂದು ತಿಳಿಸಲಾಯಿತು.

ಅಲ್ಲದೇ, ಪ್ರೌಢಶಾಲೆಗಳ ಮುಖ್ಯ ಶಿಕ್ಷಕರಿಗೆ ತರಬೇತಿ ನೀಡುವ ಕುರಿತು ಚರ್ಚೆ ನಡೆಸಲಾಯಿತು. ಡಿಡಿಪಿಐಗಳಿಗೆ ಹಾಗೂ ಡಿವೈಪಿಗಳಿಗೆ ವಾರ್ಷಿಕ ಕ್ರಿಯಾಯೋಜನೆ ತಯಾರಿಕೆ ಪ್ರಸಕ್ತ ವರ್ಷದ ಡಿಸೆಂಬರ್ 15 ಹಾಗೂ

16ರಂದು ಕಾರ್ಯಾಗಾರ ನಡೆಸಲಾಗುವುದು. ಸ್ಥಳದ ಕುರಿತು ನಂತರ ತಿಳಿಸಲಾಗುವುದು ಎಂದು ನಿರ್ದೇಶಕರು ತಿಳಿಸಿದರು.

(ಕ್ರಮ: ನಿರ್ದೇಶಕರು, ರಾ.ಮಾ.ಯೋ.ಅ., ಬೆಂಗಳೂರು ಹಾಗೂ ಮೈಸೂರು ವಿಭಾಗದ ಎಲ್ಲಾ ಉಪ ನಿರ್ದೇಶಕರು (ಆಡಳಿತ) ಹಾಗೂ ಉಪ ನಿರ್ದೇಶಕರು (ಅಭಿವೃದ್ಧಿ)

**<u>ಯೋಜನಾ ವಿಭಾಗದ ಪ್ರಗತಿ ಪರಿಶೀಲನೆ:</u>**

2011–12ನೇ ಸಾಲಿಗೆ ಪ್ರಾಥಮಿಕ ಶಾಲೆಗಳಲ್ಲಿ ಕುಡಿಯುವ ನೀರು ಹಾಗೂ ಶೌಚಾಲಯ ಪರಿಶೀಲನೆಯನ್ನು ನಡೆಸಲಾಯಿತು. ಕಡ್ಡಾಯ ಶಿಕ್ಷಣ ಯೋಜನೆಯ ಅನ್ವಯ ಶಾಲೆಗಳಲ್ಲಿ ಕುಡಿಯುವ ನೀರು ಹಾಗೂ ಶೌಚಾಲಯಗಳನ್ನು ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಒದಗಿಸಬೇಕಿದ್ದು, ಪ್ರಗತಿ ಹಂತದ ಬಗ್ಗೆ ಪರಿಶೀಲನೆ ನಡೆಸಲಾಯಿತು. ಸುಪ್ರಿಂ ಕೋರ್ಟ್‌ಗೆ ನೀಡಿದ ಅಂಕಿಅಂಶಗಳು ಹಾಗೂ ಉಚ್ಚ ನ್ಯಾಯಾಲಯಕ್ಕೆ ನೀಡಿದ ಅಂಕಿಅಂಶಗಳಲ್ಲಿ ವ್ಯತ್ಯಾಸಗಳಿದ್ದು ಅವುಗಳನ್ನು ಜಿಲ್ಲಾವಾರು ವಿವರಣೆ ನೀಡಲಾಯಿತು. ಮತ್ತು ಬಾಕಿಯುಳಿದ ಜಿಲ್ಲೆಗಳ ಉಪ ನಿರ್ದೇಶಕರಿಗೆ ಕಾಮಗಾರಿಗಳನ್ನು ನವೆಂಬರ್ ಮತ್ತು ಡಿಸೆಂಬರ್ ಅಂತ್ಯಕ್ಕೆ ಇತ್ಯರ್ಥ ಪಡಿಸಿ ವರದಿ ನೀಡಲು ಹಾಗೂ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಂದ ಕಾಮಗಾರಿ ಮುಕ್ತಾಯಗೊಂಡಿರುವ ಬಗ್ಗೆ ಧೃಡೀಕರಣವನ್ನು ಪಡೆದು ನೀಡಬೇಕೆಂದು ಸೂಚನೆಯನ್ನು ನೀಡಲಾಯಿತು. ಸುಪ್ರೀಂ ಕೋರ್ಟ್‌ನಲ್ಲಿ ವರ್ಷಾಂತ್ಯದೊಳಗೆ ಪೂರ್ಣಗೊಳಿಸುವುದಾಗಿ ಅಫಿಡವಿಟ್ ಸಲ್ಲಿಸಿರುವುದರಿಂದ ಇದನ್ನು ಕಡ್ಡಾಯವಾಗಿ ಮಾಡತಕ್ಕದ್ದು ಎಂದು ಸೂಚಿಸಲಾಯಿತು.

ಅದರಂತೆ, ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಭಾಗಗಳಿಗೆ ನೀಡಲಾದ ಕುಡಿಯುವ ನೀರು ಹಾಗೂ ಶೌಚಾಲಯ ಕಾಮಗಾರಿ ನಿರ್ಮಾಣದ ಕಾಮಗಾರಿಯ ಪ್ರಗತಿ ಪರಿಶೀಲನೆಯನ್ನು ನಡೆಸಲಾಯಿತು. ಕಾಮಗಾರಿ ಮುಕ್ತಾಯಗೊಳಿಸಿದ ನಂತರ ಅನುದಾನ ಬಳಕೆಯಾದ ಬಗ್ಗೆ ಉಪಯೋಗತಾ ಪ್ರಮಾಣಪತ್ರಗಳನ್ನು ತುರ್ತಾಗಿ ಸಲ್ಲಿಸಲು ಸೂಚನೆ ನೀಡಲಾಯಿತು.

ಪ್ರಾಥಮಿಕ ಶಾಲಾ ಕುಡಿಯುವ ನೀರು **2011–12** [ಆರ್ಥಿಕ ಮತ್ತು ಭೌತಿಕ ಪ್ರಗತಿ]

| ಕ್ರ ಸಂ) | ಜಿಲ್ಲೆಯ ಹೆಸರು | ಸ.ಶಿ.ಅ. | ಪ್ರಗತಿ | ಜಿ.ಪಂ. | ಪ್ರಗತಿ | ಸರ್ಕಾರ ಗುರಿ | ಪ್ರಗತಿ | ಒಟ್ಟು ಗುರಿ | ಒಟ್ಟು ಪ್ರಗತಿ | ಸುಪ್ರೀಂ ಕೋರ್ಟ್‌ಗೆ ನೀಡಿರುವ ಗುರಿ | ಪ್ರಗತಿ | ಉಳಿಕೆ |
|---|---|---|---|---|---|---|---|---|---|---|---|---|
| 1 | ಬೆಂಗಳೂರು ಗ್ರಾಮಾಂತರ | 32 | 20 | 91 | 91 | 5 | 5 | 128 | 116 | 32 | 32 | 0 |
| 2 | ಬೆಂಗಳೂರು(ಉತ್ತರ) | 0 | 0 | 0 | 0 | 0 | 0 | 0 | 0 | 0 | 0 | 0 |
| 3 | ಬೆಂಗಳೂರು ದಕ್ಷಿಣ | 0 | 0 | 0 | 0 | 0 | 0 | 0 | 0 | 0 | 0 | 0 |
| 4 | ರಾಮನಗರ | 1 | 1 | 128 | 128 | 5 | 5 | 134 | 134 | 70 | 70 | 0 |
| 5 | ಕೋಲಾರ | 0 | 0 | 240 | 0 | 5 | 5 | 245 | 245 | 4 | 4 | 0 |
| 6 | ಚಿಕ್ಕಬಳ್ಳಾಪುರ | 150 | 150 | 542 | 542 | 8 | 8 | 649 | 649 | 99 | 99 | 0 |
| 7 | ದಾವಣಗೆರೆ | 1 | 1 | 48 | 48 | 5 | 5 | 54 | 54 | 58 | 58 | 0 |
| 8 | ಚಿತ್ರದುರ್ಗ | 0 | 0 | 53 | 0 | 5 | 0 | 58 | 58 | 65 | 65 | 0 |
| 9 | ಶಿವಮೊಗ್ಗ | 2 | 0 | 189 | 0 | 7 | 0 | 198 | 198 | 0 | 0 | 0 |
| 10 | ತುಮಕೂರು | 52 | 0 | 142 | 0 | 27 | 11 | 221 | 57 | 363 | 142 | 221 |
| 11 | ಮಧುಗಿರಿ | 9 | 9 | 15 | 0 | 0 | 0 | 24 | 9 | 0 | 9 | 0 |
| 12 | ಮೈಸೂರು | 76 | 76 | 127 | 127 | 5 | 5 | 208 | 208 | 178 | 178 | 0 |
| 13 | ಮಂಡ್ಯ | 5 | 5 | 160 | 160 | 6 | 6 | 171 | 171 | 169 | 169 | 0 |

| | | | | | | | | | | | | |
|---|---|---|---|---|---|---|---|---|---|---|---|---|
| 14 | ಚಾಮರಾಜನಗರ | 1 | 1 | 81 | 81 | 10 | 10 | 92 | 92 | 44 | 44 | 0 |
| 15 | ಹಾಸನ | 0 | 0 | 198 | 198 | 21 | 21 | 219 | 219 | 210 | 210 | 0 |
| 16 | ಚಿಕ್ಕಮಗಳೂರು | 41 | 0 | 46 | 0 | 5 | 0 | 92 | 51 | 62 | 51 | 00 |
| 17 | ಕೊಡಗು | 0 | 0 | 64 | 0 | 5 | 0 | 69 | 96 | 12 | 12 | 0 |
| 18 | ದಕ್ಷಿಣ ಕನ್ನಡ | 0 | 0 | 0 | 0 | 0 | 0 | 0 | 0 | 0 | 0 | 0 |
| 19 | ಉಡುಪಿ | 0 | 0 | 72 | 37 | 5 | 0 | 77 | 37 | 65 | 50 | 37 |
| | | 370 | 263 | 2196 | 1412 | 124 | 81 | 2639 | 2394 | 1431 | 1193 | 258 |

ಪ್ರೌಢಶಾಲಾ ಕುಡಿಯುವ ನೀರು **2011–12** [ಆರ್ಥಿಕ ಮತ್ತು ಭೌತಿಕ ಪ್ರಗತಿ]

| ಕ್ರ.ಸಂ) | ಜಿಲ್ಲೆಯ ಹೆಸರು | **RMSA** ಗುರಿ | ಪ್ರಗತಿ | ಜಿ.ಪಂ.ಗುರಿ | ಪ್ರಗತಿ | ಸರ್ಕಾರ ಗುರಿ | ಪ್ರಗತಿ | ಒಟ್ಟು ಗುರಿ | ಒಟ್ಟು ಪ್ರಗತಿ | ಹೈಕೋರ್ಟ್‌ಗೆ ನೀಡಿರುವ ಗುರಿ | ಪ್ರಗತಿ | ಉಳಿಕೆ |
|---|---|---|---|---|---|---|---|---|---|---|---|---|
| 1 | ಬೆಂಗಳೂರು( ಗ್ರಾ) | **6** | 0 | **0** | 0 | 0 | 0 | 6 | 6 | 2 | 6 | 0 |
| 2 | ಬೆಂಗಳೂರು(ಉತ್ತರ) | **0** | 0 | **68** | 68 | 13 | 13 | 81 | 81 | 81 | 81 | 0 |
| 3 | ಬೆಂಗಳೂರು ದಕ್ಷಿಣ | **0** | 0 | **0** | 0 | 0 | 0 | 0 | 0 | 0 | 0 | 0 |
| 4 | ರಾಮನಗರ | **0** | 0 | **14** | 14 | 0 | 0 | 14 | 14 | 0 | 0 | 0 |
| 5 | ಕೋಲಾರ | **0** | 0 | **14** | 0 | 6 | 0 | 20 | 20 | 20 | 20 | 0 |
| 6 | ಚಿಕ್ಕಬಳ್ಳಾಪುರ | **0** | 0 | **42** | 0 | 7 | 0 | 49 | 13 | 49 | 00 | 49 |
| 7 | ದಾವಣಗೆರೆ | **0** | 0 | **35** | 35 | 8 | 8 | 43 | 43 | 43 | 43 | 0 |
| 8 | ಚಿತ್ರದುರ್ಗ | **0** | 0 | **4** | 0 | 5 | 0 | 9 | 0 | 9 | 9 | 0 |
| 9 | ಶಿವಮೊಗ್ಗ | **11** | 0 | **0** | 0 | 0 | 0 | 11 | 11 | 0 | 0 | 0 |
| 10 | ತುಮಕೂರು | **0** | 0 | **98** | 0 | 27 | 0 | 125 | 0 | 125 | 125 | 0 |
| 11 | ಮಧುಗಿರಿ | **0** | 0 | **0** | 0 | 0 | 0 | 0 | 0 | 0 | 0 | 0 |
| 12 | ಮೈಸೂರು | **7** | 7 | **77** | 77 | 20 | 20 | 104 | 104 | 104 | 104 | 0 |
| 13 | ಮಂಡ್ಯ | **0** | 0 | **95** | 95 | 18 | 18 | 113 | 113 | 113 | 113 | 0 |
| 14 | ಚಾಮರಾಜನಗರ | **0** | 0 | **1** | 1 | 7 | 0 | 8 | 5 | 8 | 8 | 0 |
| 15 | ಹಾಸನ | **0** | 0 | **149** | 91 | 34 | 34 | 183 | 125 | 183 | 183 | 58 |
| 16 | ಚಿಕ್ಕಮಗಳೂರು | **0** | 0 | **7** | 7 | 20 | 20 | 27 | 27 | 27 | 27 | 0 |
| 17 | ಕೊಡಗು | **0** | 0 | **12** | 0 | 0 | 0 | 12 | 0 | 0 | 0 | 0 |
| 18 | ದಕ್ಷಿಣ ಕನ್ನಡ | **0** | 0 | **48** | 0 | 8 | 0 | 56 | 56 | 56 | 56 | 0 |
| 19 | ಉಡುಪಿ | **0** | 0 | **15** | 0 | 11 | 0 | 26 | 25 | 26 | 26 | 0 |
| | **ಒಟ್ಟು** | **24** | **7** | **679** | **388** | **184** | **113** | **887** | **637** | **846** | **850** | **0** |

ಪ್ರಾಥಮಿಕ ಶೌಚಾಲಯ **2011–12** [ಆರ್ಥಿಕ ಮತ್ತು ಭೌತಿಕ ಪ್ರಗತಿ]

| ಕ್ರ.ಸಂ | ಜಿಲ್ಲೆಯ ಹೆಸರು | ಸ.ಶಿ.ಅ. ಗುರಿ | ಪ್ರಗತಿ | ಜಿ.ಪಂ .ಗುರಿ | ಪ್ರಗತಿ | ಸರ್ಕಾರ ಗುರಿ | ಪ್ರಗತಿ | ಒಟ್ಟು ಗುರಿ | ಒಟ್ಟು ಪ್ರಗತಿ | ಸುಪ್ರಿಂ ಕೋರ್ಟ್ ಗೆ ನೀಡಿರುವ ಗುರಿ | ಸಾಧನೆ | ಉಳಿಕೆ |
|---|---|---|---|---|---|---|---|---|---|---|---|---|
| 1 | ಬೆಂಗಳೂರು [ಗ್ರಾ] | 108 | 46 | 0 | 0 | 0 | 0 | 108 | 46 | 272 | 272 | 0 |
| 2 | ಬೆಂಗಳೂರು(ಉತ್ತರ) | 0 | 0 | 0 | 0 | 14 | 14 | 14 | 14 | 0 | 0 | 0 |
| 3 | ಬೆಂಗಳೂರು ದಕ್ಷಿಣ | 5 | 5 | 7 | 7 | 5 | 5 | 17 | 17 | 86 | 86 | 0 |
| 4 | ರಾಮನಗರ | 74 | 74 | 327 | 327 | 0 | 0 | 401 | 401 | 384 | 384 | 0 |
| 5 | ಕೋಲಾರ | 70 | 0 | 185 | 0 | 142 | 0 | 397 | 266 | 4 | 4 | 0 |
| 6 | ಚಿಕ್ಕಬಳ್ಳಾಪುರ | 0 | 0 | 428 | 468 | 65 | 65 | 493 | 493 | 805 | 805 | 0 |
| 7 | ದಾವಣಗೆರೆ | 414 | 76 | 157 | 23 | 0 | 0 | 571 | 99 | 458 | 458 | 0 |
| 8 | ಚಿತ್ರದುರ್ಗ | 13 | 0 | 106 | 0 | 0 | 0 | 119 | 0 | 214 | 150 | 64 |
| 9 | ಶಿವಮೊಗ್ಗ | 20 | 0 | 14 | 0 | 15 | 0 | 49 | 11 | 43 | 43 | 0 |
| 10 | ತುಮಕೂರು | 18 | 0 | 45 | 0 | 3 | 0 | 66 | 18 | 753 | 722 | 31 |
| 11 | ಮಧುಗಿರಿ | 8 | 6 | 82 | 53 | 1 | 1 | 91 | 60 | 0 | 0 | 0 |
| 12 | ಮೈಸೂರು | 123 | 83 | 268 | 268 | 0 | 0 | 391 | 351 | 500 | 356 | 144 |
| 13 | ಮಂಡ್ಯ | 16 | 16 | 132 | 132 | 74 | 74 | 222 | 222 | 518 | 518 | 0 |
| 14 | ಚಾಮರಾಜನಗರ | 25 | 20 | 27 | 27 | 21 | 21 | 73 | 68 | 468 | 463 | 5 |
| 15 | ಹಾಸನ | 34 | 34 | 118 | 118 | 147 | 147 | 299 | 299 | 1410 | 1410 | 0 |
| 16 | ಚಿಕ್ಕಮಗಳೂರು | 213 | 213 | 1 | 1 | 0 | 0 | 214 | 214 | 363 | 363 | 0 |
| 17 | ಕೊಡಗು | 2 | 0 | 39 | 0 | 0 | 0 | 41 | 0 | 44 | 44 | 0 |
| 18 | ದಕ್ಷಿಣ ಕನ್ನಡ | 22 | 0 | 154 | 0 | 0 | 0 | 176 | 91 | 177 | 164 | 13 |
| 19 | ಉಡುಪಿ | 85 | 85 | 6 | 6 | 0 | 0 | 91 | 91 | 93 | 93 | 0 |
| | | 1250 | 658 | 2096 | 1430 | 487 | 327 | 3833 | 2761 | 6592 | 6273 | 257 |

ಪ್ರೌಢ ಶೌಚಾಲಯ **2011-12** [ಆರ್ಥಿಕ ಮತ್ತು ಭೌತಿಕ ಪ್ರಗತಿ]

| ಕ್ರ.ಸಂ | **ಜಿಲ್ಲೆ** | ಆರ್.ಎಂ.ಎಸ್.ಎ ಗುರಿ | **ಪ್ರಗತಿ** | **ಜಿ.ಪಂ ಗುರಿ** | **ಪ್ರಗತಿ** | **ಸರ್ಕಾರ ಗುರಿ** | **ಪ್ರಗತಿ** | **ಒಟ್ಟು ಗುರಿ** | ಒಟ್ಟು ಪ್ರಗತಿ | ಸುಪ್ರಿಂ ಕೋರ್ಟ್ ಗೆ ನೀಡಿರುವ ಗುರಿ | ಸಾಧನೆ | ಉಳಿಕೆ |
|---|---|---|---|---|---|---|---|---|---|---|---|---|
| 1 | ಬೆಂಗಳೂರುಗ್ರಾಮಾಂತರ | **12** | 0 | 0 | 0 | **0** | 0 | 12 | 12 | 11 | 11 | 0 |
| 2 | ಬೆಂಗಳೂರು(ಉತ್ತರ) | **0** | 0 | 0 | 0 | **21** | 21 | 21 | 21 | 21 | 21 | 0 |
| 3 | ಬೆಂಗಳೂರು ದಕ್ಷಿಣ | **0** | 0 | 0 | 0 | **0** | 0 | 0 | 0 | 0 | 0 | 0 |
| 4 | ರಾಮನಗರ | **0** | 0 | 34 | 34 | **3** | 3 | 37 | 37 | 37 | 37 | 0 |
| 5 | ಕೋಲಾರ | **0** | 0 | 22 | 0 | **22** | 0 | 44 | 11 | 44 | 44 | 33 |
| 6 | ಚಿಕ್ಕಬಳ್ಳಾಪುರ | **0** | 0 | 70 | 0 | **0** | 0 | 70 | 0 | 49 | 49 | 0 |
| 7 | ದಾವಣಗೆರೆ | **2** | 2 | 14 | 4 | **21** | 10 | 37 | 16 | 37 | 37 | 10 |
| 8 | ಚಿತ್ರದುರ್ಗ | **0** | 0 | 15 | 0 | **49** | 0 | 64 | 0 | 64 | 64 | 28 |

| | | | | | | | | | | | |
|---|---|---|---|---|---|---|---|---|---|---|---|
| 9 | ಶಿವಮೊಗ್ಗ | **0** | 0 | 26 | 0 | **43** | 0 | 69 | 13 | 31 | 31 | 27 |
| 10 | ತುಮಕೂರು | **0** | 0 | 26 | 0 | **43** | 0 | 69 | 0 | 69 | 0 | 69 |
| 11 | ಮಧುಗಿರಿ | **0** | 0 | 14 | 0 | **3** | 0 | 17 | 14 | 0 | 0 | 3 |
| 12 | ಮೈಸೂರು | **59** | 59 | 2 | 0 | **14** | 14 | 75 | 73 | 75 | 75 | 2 |
| 13 | ಮಂಡ್ಯ | **2** | 0 | 0 | 0 | **67** | 67 | 69 | 67 | 69 | 69 | 2 |
| 14 | ಚಾಮರಾಜನಗರ | **0** | 0 | 0 | 0 | **45** | 45 | 45 | 45 | 45 | 45 | 0 |
| 15 | ಹಾಸನ | **0** | 0 | 19 | 19 | **74** | 74 | 93 | 93 | 93 | 93 | 0 |
| 16 | ಚಿಕ್ಕಮಗಳೂರು | **39** | 20 | 1 | 1 | **0** | 0 | 40 | 21 | 26 | 26 | 19 |
| 17 | ಕೊಡಗು | **0** | 0 | 26 | 26 | **0** | 0 | 26 | 26 | 9 | 9 | 0 |
| 18 | ದಕ್ಷಿಣ ಕನ್ನಡ | **0** | 0 | 0 | 0 | **57** | 57 | 57 | 57 | 57 | 57 | 0 |
| 19 | ಉಡುಪಿ | **0** | 0 | 12 | 2 | **29** | 29 | 41 | 31 | 30 | 30 | 0 |
| | ಒಟ್ಟು | **114** | 81 | 281 | 86 | **491** | 320 | 886 | 537 | 767 | 767 | 193 |

ಕುಡಿಯುವ ನೀರು ಪ್ರಾಥಮಿಕ ಮತ್ತು ಪ್ರೌಢ ನ್ಯಾಯಾಲಯದ ಆದೇಶದಂತೆ ಅಕ್ಟೋಬರ್ 31ರೊಳಗೆ ಪೂರ್ಣಗೊಳಿಸಬೇಕು, ಶೌಚಾಲಯ ನಿರ್ಮಾಣವನ್ನು 30.11.2011ರೊಳಗೆ ಪೂರ್ಣಗೊಳಿಸಬೇಕು. ಅಪೂರ್ಣಗೊಂಡ ಕಾಮಗಾರಿಗಳನ್ನು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರುಗಳು ಡಿಸೆಂಬರ್ ಅಂತ್ಯದೊಳಗೆ ಕಡ್ಡಾಯವಾಗಿ ಪೂರ್ಣಗೊಳಿಸಿ ಸಂಬಂಧಿಸಿದ ಜಿಲ್ಲಾಧಿಕಾರಿಗಳಿಂದ ಉಪಯೋಗತಾ ಪ್ರಮಾಣಪತ್ರಗಳನ್ನು ನೀಡಬೇಕು ಎಂದು ತಿಳಿಸಿದರು.

*ಶಿಕ್ಷಕರ ವಸತಿ ಗೃಹ*

2008–09, 2009–10ನೇ ಸಾಲಿನ ಶಿಕ್ಷಕರ ವಸತಿ ಗೃಹದ ಕಾಮಗಾರಿಯ ಪ್ರಗತಿ ಪರಿಶೀಲನೆ ನಡೆಸಲಾಯಿತು. ಮಾಹಿತಿಯನ್ನು ರಾಜೀವಗಾಂಧಿ ಹೌಸಿಂಗ್ ಕಾರ್ಪೋರೇಷನ್, ಸಂಬಂಧಿಸಿದ ಜಿಲ್ಲಾ ನಿರ್ಮಿತಿ ಕೇಂದ್ರದ ಇಂಜಿನಿಯರ್ ಮತ್ತು ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರಿಂದ ಪರಿಶೀಲನೆ ನಡೆಸಿ ಕಾಮಗಾರಿಯ ಹಂತದ ಬಗ್ಗೆ ಖಚಿತಪಡಿಸಿಕೊಳ್ಳಲಾಯಿತು. ಶಿಕ್ಷಕರ ವಸತಿ ಗೃಹಗಳಿಗೆ ಕಲ್ಪಿಸಬೇಕಿದ್ದ ಕುಡಿಯುವ ನೀರು ಹಾಗೂ ವಿದ್ಯುತ್ ಸೌಕರ್ಯ ಕಡ್ಡಾಯವಾಗಿ ಕಲ್ಪಿಸಿದ ನಂತರ ಹಸ್ತಾಂತರ ಮಾಡಲು / ಪಡೆಯಲು ಸ್ಪಷ್ಟ ಸೂಚನೆ ನೀಡಲಾಯಿತು. ಅಪೂರ್ಣಗೊಂಡ ಕಟ್ಟಡಗಳನ್ನು ಹಸ್ತಾಂತರ ಮಾಡಿಕೊಳ್ಳದಿರಲು ಸೂಚನೆಯನ್ನು ನೀಡಲಾಯಿತು. ಚರಂಡಿ ವ್ಯವಸ್ಥೆಗಾಗಿ ಆಯಾ ಗ್ರಾಮ ಪಂಚಾಯತ್‌ನಲ್ಲಿ ಮಂಜೂರಾತಿಗೆ ಕ್ರಮವಹಿಸಲು ನಿರ್ದೇಶನ ನೀಡಲಾಯಿತು. ಕಟ್ಟಡ ಸುಸಜ್ಜಿತವಾಗಿದ್ದಲ್ಲಿ ಶಿಕ್ಷಕರಿಗೆ ಹಂಚಿಕೆ ಮಾಡಲು ಮತ್ತು ಹಂಚಿಕೆಯಾದ ಶಿಕ್ಷಕರು ಕಡ್ಡಾಯವಾಗಿ ವಾಸವಿರುವಂತೆ ಕ್ರಮ ವಹಿಸಲು ಸೂಚಿಸಲಾಯಿತು. ಕಾಮಗಾರಿಗಳನ್ನು ಈಗ ನಿಗದಿಪಡಿಸಿದ ಅವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ಅನುದಾನ ಹಿಂಪಡೆಯಲಾಗುವುದು ಎಂದು ಎಚ್ಚರಿಕೆ ನೀಡಲಾಯಿತು. ವಸತಿ ಗೃಹದ ನಿರ್ಮಾಣ ಹಂತದ ಬಗ್ಗೆ ಬಾರ್ ಚಾರ್ಟ್ ನೀಡಲು ರಾಜೀವ ಗಾಂಧಿ ಗೃಹ ನಿರ್ಮಾಣ ಸಂಸ್ಥೆಯವರಿಗೆ ಸೂಚನೆ ನೀಡಲಾಯಿತು.

ರಾಜೀವ ಗಾಂಧಿ ಗೃಹ ನಿರ್ಮಾಣ ಸಂಸ್ಥೆಯ ಅಭಿಯಂತರರು ಮಾತನಾಡಿ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಕೊಂಡ್ಲಹಳ್ಳಿಯಲ್ಲಿ ಶಿಕ್ಷಕರ ವಸತಿ ಗೃಹ ಕಾಮಗಾರಿಯು ಪೂರ್ಣಗೊಂಡು ಹಸ್ತಾಂತರ ಆಗಿದೆ. ಬಿಇಓ, ಮೊಳಕಾಲ್ಮೂರು ಇವರು ಮಾಡಿಕೊಂಡಿರುತ್ತಾರೆ. ಆದರೆ ಇನ್ನೂ ಶಿಕ್ಷಕರು ವಾಸಕ್ಕೆ ಹೋಗಿಲ್ಲ. ವಸತಿ ಗೃಹದಲ್ಲಿ ಕರೆಂಟ್ ಇದೆ. ಅದೇ ತಾಲ್ಲೂಕಿನ ಬಿ.ಜಿ.ಕೆರೆಯ ಶಿಕ್ಷಕರ ವಸತಿ ಗೃಹ ಹಸ್ತಾಂತರ ಮಾಡಿಲ್ಲ ಎಂದು ತಿಳಿಸುತ್ತಾ ನಾಳೆ ಹಸ್ತಾಂತರ ಮಾಡಿಕೊಳ್ಳಲಾಗುವುದು ಎಂದರು. ರಾಂಪುರ ಗ್ರಾಮದಲ್ಲಿರುವ ಶಿಕ್ಷಕರ ವಸತಿ ಗೃಹವನ್ನು ಡಿಸೆಂಬರ್ ಅಂತ್ಯಕ್ಕೆ ನೀಡಲಾಗುತ್ತದೆ. ಹೊಸದುರ್ಗ ತಾಲ್ಲೂಕಿಗೆ ಮಂಜೂರು ಆಗಿರುವ ಶಿಕ್ಷಕರ ವಸತಿ

ಗೃಹಕ್ಕೆ ಪ್ಲಾಸ್ಟರಿಂಗ್ ಆಗುತ್ತಿದೆ. ಜನವರಿಯಲ್ಲಿ ನೀಡಲಾಗುವುದು ಎಂದು ತಿಳಿಸಿದರು. ಹಿರಿಯೂರು, ಚಿತ್ರದುರ್ಗ ತಾಲ್ಲೂಕು ಹಾಗೂ ಹೊಳಲ್ಕೆರೆ ತಾಲ್ಲೂಕಿಗೆ ಮಂಜೂರಾದ ಶಿಕ್ಷಕರ ವಸತಿ ಗೃಹಗಳು ಪಾಯದ ಹಂತದಲ್ಲಿದೆ ಎಂದು ತಿಳಿಸಿದರು. ಮಾನ್ಯ ಆಯುಕ್ತರು 31–3–2012 ಒಳಗೇ ಪೂರ್ಣಗೊಳಿಸಲು ಸೂಚನೆ ನೀಡಿದರು.

ಕೋಲಾರ ಜಿಲ್ಲೆಗೆ ಸಂಬಂಧಪಟ್ಟಂತೆ 3ನೇ ಹಂತದಲ್ಲಿ ಮಂಜೂರು ಮಾಡಲಾದ ಎನ್. ವಡ್ಡರಹಳ್ಳಿ ಗ್ರಾಮದ ಶಿಕ್ಷಕರ ವಸತಿ ಗೃಹಕ್ಕೆ ಇನ್ನೂ ಮೂಲಭೂತ ಸೌಕರ್ಯ ಆಗಿಲ್ಲ. ಮಾನ್ಯ ಆಯುಕ್ತರು ಮಾತನಾಡಿ ಡಿಸೆಂಬರ್ ಅಂತ್ಯಕ್ಕೆ ಪೂರ್ಣಗೊಳಿಸಲು ತಿಳಿಸುತ್ತಾ ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸದಿದ್ದರೆ ಅನುದಾನ ಹಿಂಪಡೆಯಲಾಗುವುದು ಎಂದು ಎಚ್ಚರಿಕೆ ನೀಡಿದರು.

ರಾಮನಗರ ಜಿಲ್ಲೆಗೆ ಸಂಬಂಧಪಟ್ಟಂತೆ ಹಂತ–4 ರಲ್ಲಿ ಮಂಜೂರಾದ ನಾಲ್ಕು ಕಾಮಗಾರಿಗಳಿಗೆ ನಿವೇಶನ ಸಿಕ್ಕಿದ್ದು ಮೇ ಅಂತ್ಯಕ್ಕೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು. ಸಾತನೂರು ಗ್ರಾಮದ ಶಿಕ್ಷಕರ ವಸತಿ ಗೃಹ ಹಸ್ತಾಂತರವಾಗಿದ್ದು ಎಂಟು ಜನ ಶಿಕ್ಷಕರು ವಾಸಿಸುತ್ತಿದ್ದಾರೆ. ತಿಪ್ಪಸಂದ್ರ ಗ್ರಾಮದ ಶಿಕ್ಷಕರ ವಸತಿ ಗೃಹ ಇಲ್ಲಿ ಕುಡಿಯುವ ನೀರು ಸೌಕರ್ಯ ಕಲ್ಪಿಸಿರಲಿಲ್ಲ. ಗ್ರಾಮ ಪಂಚಾಯತ್ ವತಿಯಿಂದ ಮಾಡಲಾಗಿದೆ. ಶಿಕ್ಷಕರಿಗೆ ಕೂಡಲೇ ಹಂಚಿಕೆ ಮಾಡಲಾಗುವುದು ಎಂದು ತಿಳಿಸಿದರು. ಆರೋಕೊಪ್ಪ ಗ್ರಾಮದಲ್ಲಿ ಇನ್ನೂ ಪ್ರಾರಂಭವಾಗಿಲ್ಲ ಎಂದರು. ನಿಗದಿತ ಅವಧಿಯಲ್ಲಿ ಅಂದರೆ ಮಾರ್ಚ್ 2012ಕ್ಕೆ ಸದರಿ ಕಾಮಗಾರಿ ಪೂರ್ಣಗೊಳಿಸಿ ಹಸ್ತಾಂತರ ಮಾಡಲು ಆಯುಕ್ತರು ಸೂಚನೆ ನೀಡಿದರು.

ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ ಹರಪನಹಳ್ಳಿ ತಾಲ್ಲೂಕಿನ ಸಿಂಗ್ರಿಹಳ್ಳಿ ಗ್ರಾಮಕ್ಕೆ ಮಂಜೂರಾದ ಶಿಕ್ಷಕರ ವಸತಿ ಗೃಹದಲ್ಲಿ ಇನ್ನೂ ನೀರಿನ ವ್ಯವಸ್ಥೆಯಿಲ್ಲ. ಅದೇ ತಾಲ್ಲೂಕಿನ ಹಲುವಾಗಿಲು ಗ್ರಾಮದಲ್ಲಿ ಕಾಮಗಾರಿ ಮುಕ್ತಾಯವಾಗಿದೆ ಮತ್ತು ಶಿಕ್ಷಕರಿಗೆ ಹಂಚಿಕೆ ಆಗಿದೆ. ಆದರೆ, ಇನ್ನೂ ಶಿಕ್ಷಕರು ವಾಸಕ್ಕೆ ಹೋಗಿಲ್ಲ ಎಂದು ಉಪ ನಿರ್ದೇಶಕರು, ದಾವಣಗೆರೆ ಇವರು ತಿಳಿಸಿದರು. ಮಾನ್ಯ ಆಯುಕ್ತರು ಮಾತನಾಡಿ ಹಂಚಿಕೆ ಮಾಡಲಾದ ಶಿಕ್ಷಕರು ಕಡ್ಡಾಯವಾಗಿ ಶಿಕ್ಷಕರ ವಸತಿ ಗೃಹದಲ್ಲಿ ವಾಸ ಮಾಡಬೇಕು. ಇಲ್ಲದಿದ್ದರೆ ಅಂತಹ ಶಿಕ್ಷಕರ ವೇತನದಲ್ಲಿ ಮನೆ ಬಾಡಿಗೆ ಭತ್ಯೆ ನಿಲ್ಲಿಸಿ / ಕಟಾವಣೆ ಮಾಡಲು ಸೂಚಿಸಿದರು. ಆದಾಗ್ಯೂ ಸಹ ಹೋಗದಿದ್ದರೆ ಅಂತಹ ಶಿಕ್ಷಕರನ್ನು ಅಮಾನತ್ತುಗೊಳಿಸಲು ಸೂಚನೆ ನೀಡಿದರು. ಎರಡು ತಿಂಗಳು ಮನೆ ಬಾಡಿಗೆ ಭತ್ಯೆ ಕಟಾವಣೆ ಮಾಡಲಾಗಿದೆ ಎಂದು ಉಪ ನಿರ್ದೇಶಕರು ತಿಳಿಸಿದರು. ಜಗಳೂರು ತಾಲ್ಲೂಕಿನ ಬಿದರಕೆರೆ ಗ್ರಾಮದಲ್ಲಿ ಕಾಮಗಾರಿಯು ಪ್ರಗತಿಯಲ್ಲಿದೆ ಎಂದರು. ಡಿಸೆಂಬರ್ ಅಂತ್ಯಕ್ಕೆ ಪೂರ್ಣಗೊಳಿಸಲು ನಿರ್ದೇಶನ ನೀಡಲಾಯಿತು. **ವಸತಿ ನಿಗಮದವರು ಶಿಕ್ಷಕರ ವಸತಿ ಗೃಹ ಕಾಮಗಾರಿಗಳ ಬಾರ್ ಚಾರ್ಟ್ ನೀಡಿರುವುದಿಲ್ಲ. ನೀಡಲು ತಿಳಿಸಲಾಯಿತು.**

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಅಮೃತೂರು ಗ್ರಾಮದ ಶಿಕ್ಷಕರ ವಸತಿ ಗೃಹಕ್ಕೆ 19 ಜನ ಶಿಕ್ಷಕರು ವಾಸಕ್ಕಾಗಿ ಹಂಚಿಕೆ ಮಾಡಲು ಅರ್ಜಿ ನೀಡಿದ್ದಾರೆ. ಹಸ್ತಾಂತರವಾಗಿಲ್ಲದ ಕಾರಣ ಹಂಚಿಕೆ ಮಾಡಿಲ್ಲ ಎಂದು ತಿಳಿಸಿದರು. ಕೂಡಲೇ ಹಸ್ತಾಂತರ ಮಾಡಲು ಉಪನಿರ್ದೇಶಕರಿಗೆ ಸೂಚನೆ ನೀಡಲಾಯಿತು. ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ ಸಿ.ಎಸ್.ಪುರ ಗ್ರಾಮದಲ್ಲಿ ಕಾಮಗಾರಿ ಆಗಿಲ್ಲ, ಕಡಬ ಗ್ರಾಮದಲ್ಲಿ ಕಾಮಗಾರಿ ಆಗಿದೆ. ಮಧುಗಿರಿ ತಾಲ್ಲೂಕಿನ ಮಿಡಿಗೇಶಿ ಗ್ರಾಮದಲ್ಲಿ ಆಗಿಲ್ಲ ಎಂದು ಉಪ ನಿರ್ದೇಶಕರು ತಿಳಿಸಿದರು. ಈ ಕಾಮಗಾರಿಗಳನ್ನು ಮೇನಲ್ಲಿ ಪೂರ್ಣಗೊಳಿಸಲಾಗುವುದು ಎಂದು ನಿಗಮದವರು ಸಭೆಗೆ ತಿಳಿಸಿದರು. ಪಾವಗಡ ತಾಲ್ಲೂಕಿನ ವೆಂಕಟಾಪುರ ಗ್ರಾಮ ಹಾಗೂ ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಗ್ರಾಮಗಳಲ್ಲಿ ಮೇಲ್ಛಾವಣಿ ಹಾಕಬೇಕು ಎಂದು ತಿಳಿಸಿದರು. ನಿಗಮದವರು ಮಾತನಾಡಿ 31–3–2012ರಲ್ಲಿ ಪೂರ್ಣಗೊಳಿಸಲಾಗುತ್ತದೆ ಎಂದು ತಿಳಿಸಿದರು. ಪೊಳವಿನಹಳ್ಳಿ ಗ್ರಾಮದ ಶಿಕ್ಷಕರ ವಸತಿ ಗೃಹ ಕಾಮಗಾರಿಯನ್ನು ಪೂರ್ಣಗೊಳಿಸಿ 2012ರ ಮೇನಲ್ಲಿ ಹಸ್ತಾಂತರ ಮಾಡಲಾಗುವುದು ಎಂದು ತಿಳಿಸಿದರು.

ಚಾಮರಾಜನಗರ ಜಿಲ್ಲೆಗೆ ಸಂಬಂಧಿಸಿದಂತೆ ಎರಡು ಕಾಮಗಾರಿಗಳು ಬಾಕಿಯಿದ್ದು ಇನ್ನೂ ಹಸ್ತಾಂತರವಾಗಿಲ್ಲ ಎಂದು ಉಪ ನಿರ್ದೇಶಕರು ತಿಳಿಸಿದರು. ಬೇಗೂರು ಹಾಗೂ ಅಂಕಲಗ ಗ್ರಾಮಗಳ ಶಿಕ್ಷಕರ ವಸತಿ ಗೃಹಗಳಲ್ಲಿ ನೀರಿನ ಸಮಸ್ಯೆ ಇದ್ದು ಹೆಚ್ಚುವರಿ ಪೈಪ್‌ಲೈನ್ ಅಳವಡಿಸಬೇಕಾಗುವುದು ಎಂದು ನಿಗಮದವರು ತಿಳಿಸಿದರು. ರೂ.40000/–+ರೂ.40000/– ಒಟ್ಟು ರೂ.90000/– ಅನುದಾನ ಬಿಡುಗಡೆ ಮಾಡಿದಲ್ಲಿ ಈ ಸಮಸ್ಯೆ ಬಗೆಹರಿಸಲು ಸಾಧ್ಯವಾಗಬಹುದಾಗಿದ್ದು, ಮಾನ್ಯ ಆಯುಕ್ತರು ಮಾತನಾಡಿ ಎಸ್ಟಿಮೇಟ್ ಮಾಡಿ ಸಲ್ಲಿಸಲು ಸೂಚಿಸಿದರು. ಈ ಹಣವನ್ನು ಟಿಬಿಎಫ್‌ನಿಂದ ಪಾವತಿಸುವುದಾಗಿ ತಿಳಿಸಿದರು.

ಸಂತೆಮರಳ್ಳಿ ಗ್ರಾಮದಲ್ಲಿ ನಿವೇಶನದ ತೊಂದರೆಯಿದ್ದು, ಜಿಲ್ಲಾಧಿಕಾರಿಗಳೊಂದಿಗೆ ಪತ್ರವ್ಯವಹಾರ ನಡೆದಿದೆ. ಗುರುತಿಸಲಾದ ನಿವೇಶನ ನೀಡದಿದ್ದಲ್ಲಿ ಶಾಲೆಯ ಮೈದಾನದಲ್ಲಿ ನಿವೇಶನ ಲಭ್ಯವಿದ್ದು ಅದರಲ್ಲೇ ಕಟ್ಟಿಸಲು ಕ್ರಮ ವಹಿಸುವುದಾಗಿ ಡಿಡಿಪಿಐ ಸ್ಪಷ್ಟನೆ ನೀಡಿದರು. ಆಯುಕ್ತರು ಕೂಡಲೇ ಕಾಮಗಾರಿಯನ್ನು ಪ್ರಾರಂಭ ಮಾಡಲು ಸೂಚನೆ ನೀಡಿದರು. ಕೊಳ್ಳೇಗಾಲ ತಾಲ್ಲೂಕಿನ ಚಿಕ್ಕಲವಾಡಿ ಗ್ರಾಮದಲ್ಲಿ ಶಿಕ್ಷಕರ ವಸತಿ ಗೃಹದ ನಿರ್ಮಾಣಕ್ಕೆ ನಿವೇಶನ ನೀಡಲಾಗಿದೆ. ಕಟ್ಟಡ ಶುರು ಆಗಿದೆ ಎಂದು ತಿಳಿಸಿದರು.

ಮೈಸೂರು ಜಿಲ್ಲೆಯ ಹೆಚ್.ಡಿ,ಕೋಟೆ ತಾಲ್ಲೂಕಿನ ಮಾದಾಪುರ ಗ್ರಾಮದಲ್ಲಿನ ಶಿಕ್ಷಕರ ವಸತಿ ಗೃಹಕ್ಕೆ ವಿದ್ಯುಚ್ಛಕ್ತಿ ಸಂಪರ್ಕ ಈ ವಾರದಲ್ಲಿ ನೀಡಲಾಗಿದೆ. ಕಾಮಗಾರಿಯಲ್ಲಿ ಸ್ವಚ್ಚತಾ ಕಾರ್ಯ ನಡೆಯುತ್ತಿದ್ದು, ಹಸ್ತಾಂತರ ಮಾಡುವುದಾಗಿ ಅನುಷ್ಟಾನಾಧಿಕಾರಿಗಳು ತಿಳಿಸಿದರು. ಡಿಸೆಂಬರ್ ಅಂತ್ಯದಲ್ಲಿ ಮುಗಿಸಲು ಆಯುಕ್ತರು ಸೂಚನೆ ನೀಡಿದರು. ಅಂತರಸಂತೆ ಹಾಗೂ ಬಿ.ಮಠಕೆರೆ ಗ್ರಾಮಗಳಲ್ಲಿ ಕಟ್ಟಡ ಕಾಮಗಾರಿ ಪೂರ್ಣವಾಗಿದೆ ಪ್ಲಾಸ್ಟರಿಂಗ್ ಕಾರ್ಯ ನಡೆಯುತ್ತಿದೆ ಎಂದು ನಿಗಮದವರು ತಿಳಿಸಿದರು. ದಿ: 31–12–2011ರೊಳಗೇ ಪೂರ್ಣಗೊಳಿಸಲು ಸೂಚನೆ ನೀಡಲಾಯಿತು. ನಂಜನಗೂಡು ತಾಲ್ಲೂಕಿನ ತಲಕಾಡು ಗ್ರಾಮದಲ್ಲಿ ಲಿಂತ್ಲ್ ಆಗಿದೆ. ಮೇ 2012ನಲ್ಲಿ ಪೂಣವಾಗುತ್ತದೆ. ಹುರಾ ಗ್ರಾಮದಲ್ಲಿ 31–12–2011 ರೊಳಗೇ ಆಗುತ್ತದೆ ಎಂದು ತಿಳಿಸಿದರು.

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ನೆಲಮಹಡಿ ಆಗಿದೆ. 15–12–2011ರೊಳಗೇ ಮಾಡಬೇಕು ಎಂದು ತಿಳಿಸಿದರು. ತರೀಕೆರೆ ತಾಲ್ಲೂಕಿನ ಬುಕ್ಕಾಂಬುದಿ ಗ್ರಾಮದಲ್ಲಿ ಮೆಟೀರಿಯಲ್ ಹಾಕಿದೆ. ಕಾಮಗಾರಿಯನ್ನು ಪ್ರಾರಂಭಿಸಿ ಮೇ 2012ರೊಳಗೇ ಪೂರ್ಣಗೊಳಿಸಲು ಸೂಚನೆ ನೀಡಲಾಯಿತು.

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಮಾದಾಪುರ ಗ್ರಾಮದಲ್ಲಿ ಶಿಕ್ಷಕರ ವಸತಿ ಗೃಹ ಕಾಮಗಾರಿಯು ಪ್ರಗತಿಯಲ್ಲಿದ್ದು ಡಿಸೆಂಬರ್ ಆಗುತ್ತದೆ ಎಂದು ತಿಳಿಸಲಾಯಿತು. ಬಿಂಡೆನವಿಲೆ ಗ್ರಾಮದ ಕಾಮಗಾರಿ ಮಾರ್ಚ್ 2012 ಹಾಗೂ ಬಿ.ಜಿ.ಪುರ ಗ್ರಾಮದ ಕಾಮಗಾರಿಗಳನ್ನು ಮಾರ್ಚ್ 2012ರೊಳಗೇ ಪೂರ್ಣಗೊಳಿಸಲು ಸೂಚನೆಯನ್ನು ನೀಡಲಾಯಿತು.

*ಕೆ.ಜಿ.ಬಿ.ವಿ. ಕಟ್ಟಡ*

ಬೆಂಗಳೂರು ಹಾಗೂ ಮೈಸೂರು ವಿಭಾಗದ ಎಲ್ಲಾ ಜಿಲ್ಲೆಗಳ ತಾಲ್ಲೂಕುವಾರು ಪ್ರಗತಿಯನ್ನು ಪರಿಶೀಲನೆಯನ್ನು ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಷನ್‌ನ ಅಭಿಯಂತರರು ಹಾಗೂ ಇಲಾಖಾಧಿಕಾರಿಗಳೊಂದಿಗೆ ಚರ್ಚಿಸುವ ಮುಖಾಂತರ ನಡೆಸಲಾಯಿತು. ನಿವೇಶನ ಹಸ್ತಾಂತರದ ಬಗ್ಗೆ ಆದಷ್ಟು ಜಾಗ್ರತೆ ಸಂಬಂಧಪಟ್ಟವರೊಡನೆ ಚರ್ಚಿಸಿ ಅಂತಿಮವಾಗಿ ಕ್ರಮವಹಿಸಲು ಸೂಚನೆ. ಮಾಡೆಲ್ ಪ್ಲಾನ್ ರೆಡಿ ಇದೆ. ಮಾಡೆಲ್ ಎಸ್ಟಿಮೇಟ್ ತಯಾರಿಸಿ ಒಂದು ತಿಂಗಳೊಳಗೇ ವರದಿ ನೀಡಲು ರಾಜ್ಯ ಅಭಿಯಂತರರರಿಗೆ ಸೂಚನೆ ನೀಡಲಾಯಿತು. ಸರ್ವೇ ನಂಬರ್, ಜಿಲ್ಲಾಧಿಕಾರಿಗಳ ಆದೇಶ ಹಾಗೂ ಆರ್‌ಟಿಸಿದೊಂದಿಗೆ ವರದಿ ನೀಡುವುದು. ಮಕ್ಕಳ ದಾಖಲಾತಿ

ಕಡಿಮೆ ಇರುವ ಕಡೆ 7ನೇ ತರಗತಿ ಮುಗಿಸಿದ ಡ್ರಾಪ್ ಔಟ್ ಗಳನ್ನು ಸೇರಿಸಲು ಅಗತ್ಯ ಕ್ರಮ ವಹಿಸುವುದು. ಪಾಂಡವಪುರದಲ್ಲಿ 1ನೇ ಡಿಸೆಂಬರ್‌ನಲ್ಲಿ ಪ್ರಾರಂಭ ಮಾಡಲಾಗುವುದು ಎಂದು ತಿಳಿಸುತ್ತಾ, 15 ಜನ ಮಕ್ಕಳನ್ನು ಗುರುತಿಸಲಾಗಿದೆ. ಹಾಗೂ ದಾಖಲಿಸಲು ಕ್ರಮವಹಿಸಲಾಗಿದೆ ಎಂದರು. ಚಾಮರಾಜನಗರದಲ್ಲಿ ಹಾಲಿ ಹಾಜರಾತಿ 27 ಆಗಿದೆ. ಉಪ್ಪಿನಮೋಳ ಎಂಬ ಸ್ಥಳದಲ್ಲಿ ಮಾಡಲಾಗುತ್ತಿದೆ. ಈ ತಿಂಗಳಲ್ಲಿ ಹಾಜರಾತಿ ಉತ್ತಮ ಮಾಡಲಾಗುವುದು ಎಂದು ತಿಳಿಸಿದರು.

ಮಕ್ಕಳ ದಾಖಲಾತಿ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಶಾಲೆಯಲ್ಲಿ 100ಕ್ಕೆ 40, ಮೈಸೂರು ಗ್ರಾಮಾಂತರ 100ಕ್ಕೆ 54, ನಂಜನಗೂಡು ತಾಲ್ಲೂಕಿನ ಶಾಲೆಗೆ 100ಕ್ಕೆ 43, ಟಿ. ನರಸೀಪುರ 100 ತಾಲ್ಲೂಕಿನ ಶಾಲೆಗೆ 15 ಹೀಗೆ ಒಟ್ಟು 400 ಕ್ಕೆ 152 ಮಕ್ಕಳಿದ್ದಾರೆ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಶಾಲೆಗೆ 100ಕ್ಕೆ 32 ಹಾಗೂ ಪಾಂಡವಪುರ ತಾಲ್ಲೂಕಿಗೆ 100ಕ್ಕೆ 0 ಇದ್ದು, 15 ಮಕ್ಕಳನ್ನು ಗುರುತಿಸಲಾಗಿದೆ ಎಂದು ತಿಳಿಸಲಾಯಿತು.

*ಆರ್.ಐ.ಡಿ.ಎಫ್*

